# ಬೃಹಚ್ಚರಣ

ಸಂಘದ ತ್ರೈಮಾಸಿಕ ವಾರ್ತಾ ಪತ್ರಿಕೆ

| ಸಂಘದ ಸದಸ್ಯರಾಗಿ | |
|---|---|
| ಮಹಾ ಪೋಷಕರು | – ₹ 25,000/– |
| ಪೋಷಕರು | – ₹ 5,000/– |
| ಸದಸ್ಯತ್ವ | – ₹ 1,000/– |
| ವಾರ್ಷಿಕ ನಿರ್ವಹಣೆ | – ₹ 500/– |

ಸಂಪುಟ : 9 ಸಂಚಿಕೆ : 4 ಖಾಸಗಿ ಪ್ರಸಾರಕ್ಕಾಗಿ ಅಕ್ಟೋಬರ್–ಡಿಸೆಂಬರ್ 2019




## ಅರ್ಪಣೆ

ಈ "ಬೃಹಚ್ಚರಣ" ಸಂಚಿಕೆಯನ್ನು ನಮ್ಮ ಸಮುದಾಯದ ಹಿತಚಿಂತಕರು, ಸಂಘದ ಮಾಜಿ ಉಪಾಧ್ಯಕ್ಷರಾದ **ಶ್ರೀ ಪದ್ಮನಾಭ** ಅವರಿಗೆ ಶ್ರದ್ಧೆ ಹಾಗೂ ಗೌರವಗಳಿಂದ ಅರ್ಪಿಸಲಾಗಿದೆ.



**ಶ್ರೀ ಶ್ರೀನಿವಾಸ ದೇವರ ಕಲ್ಯಾಣೋತ್ಸವ ವಿಶೇಷಾಂಕ**


## ಅಧ್ಯಕ್ಷರ ನುಡಿ

ಮಾನ್ಯರೇ, ಗೌರವಪೂರ್ವಕ ನಮಸ್ಕಾರಗಳು.

ತಮ್ಮೆಲ್ಲರಿಗೂ 2020ನೇ ಹೊಸ ವರ್ಷದ ಶುಭಾಶಯಗಳು. ಸಂಘವು ಹಮ್ಮಿಕೊಳ್ಳುತ್ತಿರುವ ಪ್ರತಿಯೊಂದು ಕಾರ್ಯಕ್ರಮದಲ್ಲೂ ಒಂದಲ್ಲ ಒಂದು ರೀತಿಯ ಸಹಾಯ–ಸಹಕಾರ ನೀಡುತ್ತಿರುವ ತಮ್ಮೆಲ್ಲರಿಗೂ ವಂದನೆಗಳು.

ಸಂಘ ಏರ್ಪಡಿಸಿದ್ದ ಪ್ರವಾಸ ಹಾಗೂ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ ಸುಲಲಿತವಾಗಿ ನಡೆದುದಕ್ಕೆ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರ ಸೇವಾ ಮನೋಭಾವವೇ ಕಾರಣ.

ಮುಂಬರುವ ದಿನಾಂಕ 28–02–2020 ಶುಕ್ರವಾರದಂದು ನಡೆಯಲಿರುವ **ನಾಗಾರಾಧನೆಗೆ ತಮ್ಮೆಲ್ಲರಿಗೂ ಆದರದ ಸ್ವಾಗತವನ್ನು** ಸಂಘದ ಪರವಾಗಿ ಬಯಸುತ್ತೇನೆ.




ಬಿ. ಸುಬ್ರಹ್ಮಣ್ಯಂ

## ಸಂಪಾದಕೀಯ

ನಮಸ್ಕಾರ,

'ಬೃಹಚ್ಚರಣ' ವಾರ್ತಾ ಪತ್ರಿಕೆಯ ಬಗ್ಗೆ ತಮ್ಮ ಮೆಚ್ಚುಗೆಗೆ ಸಂಪಾದಕ ಮಂಡಳಿ ಪರವಾಗಿ ವಂದನೆಗಳು. ಪತ್ರಿಕೆಯಲ್ಲಿ ಅಚ್ಚಾಗಿರುವ ಛಾಯಾಚಿತ್ರಗಳನ್ನು ಒದಗಿಸಿ ಸಹಕರಿಸಿದ ಪ್ರತಿಯೊಬ್ಬರಿಗೂ ಧನ್ಯವಾದಗಳು. ತಮ್ಮ ಅಭಿಪ್ರಾಯ, ಸಲಹೆ, ಸೂಚನೆಗೆ ಸದಾ ಸ್ವಾಗತ.




**ಕೆ.ಸಿ. ನಟರಾಜ್**
ಸಂಪಾದಕ
**9845113475**
**mmdbs.mag@gmail.com**


**ಧನ್ಯವಾದಗಳು.....** ಸಂಘದ ಹಿರಿಯ ಸದಸ್ಯರು, ಹಿತೈಷಿಗಳಾದ ಶ್ರೀಮತಿ ಇಂದಿರಮ್ಮ ಶಂಕರನಾರಾಯಣರವರು ಸಂಘದ ಚಟುವಟಿಕೆಗಳಿಗಾಗಿ 1 ಲಕ್ಷ ರೂಪಾಯಿ ದೇಣಿಗೆ ನೀಡಿರುತ್ತಾರೆ. ಸಂಘವು ದಾನಿಗಳ ಕುಟುಂಬಕ್ಕೆ ಧನ್ಯವಾದ ಸಲ್ಲಿಸಿ ಶುಭಹಾರೈಸುತ್ತದೆ.



**ಸಂಪಿಗೆ ಶ್ರೀ ಶ್ರೀನಿವಾಸ ದೇವಾಲಯದಲ್ಲಿ ನಮ್ಮವರು.....**

ಅರ್ಪಣೆ

# ಮರೆಯಾದರೂ, ಮರೆಯಲಾಗದ ಬಿ.ಎಸ್.ಪಿ. ಸರ್

ಚಿತ್ರಗಳು :
ಎನ್. ಶಿವಕುಮಾರ್
























## ಮೈ.ಮಂ.ದ್ರಾ. ಬೃಹಚ್ಚರಣ ಸಂಘ
(ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಂಗ ಸಂಸ್ಥೆ)

**ಕಾರ್ಯಕಾರಿ ಸಮಿತಿ**

**ಶ್ರೀಯುತರುಗಳಾದ**

**ಬಿ. ಸುಬ್ರಹ್ಮಣ್ಯಂ, 9449869667**
ಅಧ್ಯಕ್ಷರು

**ಎಚ್.ಕೆ. ಶಶಿಧರ್, 9845173766**
ಉಪಾಧ್ಯಕ್ಷರು

**ಎಸ್.ಸಿ. ಶ್ರೀನಿವಾಸ, 9483725949**
ಕಾರ್ಯದರ್ಶಿ

**ಅರುಣ್ ವಿ., 9880166001**
ಸಹಕಾರ್ಯದರ್ಶಿಗಳು

**ಎಸ್. ಸತ್ಯನಾರಾಯಣ, 9980945699**
ಖಜಾಂಚಿ

**ಟಿ.ಪಿ. ಸೂರ್ಯನಾರಾಯಣ, 9945484268**
ಸಹ ಖಜಾಂಚಿ

**ಸದಸ್ಯರು**

**ಎಸ್. ಸೋಮಸುಂದರ, 9900113298**
**ಕೆ.ಜಿ. ವೆಂಕಟೇಶ್, 9964012687**
**ಮಂಜುನಾರಾಯಣ್ ಕೆ. 9886114279**
**ಕೆ. ಗುಂಡಪ್ಪ, 9845332315**
**ಕೆ.ಬಿ.ಎಸ್. ಶರ್ಮ, 94820 87344**
**ಟಿ.ಎಸ್. ರಮೇಶನ್, 9663874531**
**ಸರಸ್ವತಿ ನಟರಾಜನ್, 9480619730**
**ಆರ್. ಗಣೇಶ್ ಶ್ರೀಧರ್, 9880187686**
**ಟಿ.ಎಸ್. ನಾಗೇಶ್, 9980662118**
**ಶಂಕರಪ್ರಸಾದ್ ಬಿ.ಆರ್., 9845663833**
**ಟಿ.ಎನ್. ರವಿಕಿರಣ್, 9972677005**
**ಅರುಣ್ ಸೇತುರಾಮ್, 9900313929**
**ನಿತಿನ್‌ಭಾಸ್ಕರ್, 9844417333**

ಲೆಕ್ಕಪರಿಶೋಧಕರು

**ಬಿ.ಎನ್.ಜಿ. ಪ್ರಸಾದ್, 9845128229**

**ಗೌರವ ಸಂಪಾದಕ ಮಂಡಳಿ–ಬೃಹಚ್ಚರಣ ಪತ್ರಿಕೆ**

**ಸಂಘದ ಅಧ್ಯಕ್ಷರು, ಕಾರ್ಯದರ್ಶಿ**

**ಎಸ್. ಸೋಮಸುಂದರ, 9900113298**
ನಿಕಟಪೂರ್ವ ಅಧ್ಯಕ್ಷರು

**ಕೆ.ಸಿ. ನಟರಾಜ್, 9845113475**
ಸಂಪಾದಕರು

**ಲಲಿತಾ ರಮೇಶ್, 9945199637**
ಉಪಸಂಪಾದಕಿ

**ಶಿವಕುಮಾರ್ ಎನ್., 6362337254**
ಛಾಯಾಗ್ರಾಹಕ

ಅರ್ಪಣೆ

## ಬಿ.ಎಸ್.ಪಿ.ಸರ್...



**ನ**ಮ್ಮ ಸಮುದಾಯದಲ್ಲೇ ಒಬ್ಬ ಶಿಸ್ತಿನ ಸಿಪಾಯಿ, ಸ್ನೇಹಜೀವಿ, ಸುಸಂಸ್ಕೃತರಾಗಿದ್ದ ಬಿ.ಎಸ್.ಪಿ. ಬಾಹ್ಯದಲ್ಲಿ ಗಡುಸಾಗಿ ಕಂಡರೂ ಅಂತರಂಗದಲ್ಲಿ ಸಹೃದಯರಾಗಿದ್ದರು.

ಬೃಹಚ್ಚರಣ ಸಂಘದ ಏಳಿಗೆಯ ಬಗ್ಗೆ ಹೊಂದಿದ್ದ ಕಾಳಜಿ, ಅವರು ಭಾಗವಹಿಸುವಿಕೆ ಸಂಘದ ಪ್ರತೀ ಕಾರ್ಯಕ್ರಮದಲ್ಲೂ ಎದ್ದು ಕಾಣುತ್ತಿತ್ತು. ಪ್ರತೀ ಸರ್ವಸದಸ್ಯರ ಸಭೆಯಲ್ಲಿ ಉಪಯುಕ್ತ ಸಲಹೆಗಳನ್ನು ನೀಡುತ್ತಿದ್ದರು. ಬೃಹಚ್ಚರಣ ಸಂಘವು ಹಮ್ಮಿಕೊಂಡಿದ್ದ "ವೈಕುಂಠವಾಹನ" ಕೊಡುಗೆ ಅವರ ಸಲಹೆಗಳಲ್ಲಿ ಒಂದು. ಬೃಹಚ್ಚರಣ ಸಂಘಕ್ಕಾಗಿ ತನ್ನದೇ ಆದ ಸ್ವಂತ ಕಟ್ಟಡ ಇರಬೇಕೆಂಬ ಇಚ್ಛೆ ವ್ಯಕ್ತಪಡಿಸಿದ್ದರು.

ಬಿ.ಎಸ್.ಪಿ.ಯವರು ಎಸ್.ಎಸ್.ಎಲ್.ಸಿ. ಆದ ಕೂಡಲೇ ಶ್ರೀಮತಿ ಇಂದಿರಮ್ಮರನ್ನು ವಿವಾಹವಾದರು. ನಂತರ ಹಂತಹಂತವಾಗಿ ಆಸಕ್ತಿಯಿಂದ ವಿದ್ಯಾಭ್ಯಾಸ ಮುಂದುವರೆಸಿ ಸ್ನಾತಕೋತ್ತರ ಪದವಿಯನ್ನು ಪಡೆದರು. ತಮ್ಮ ವೃತ್ತಿ ಜೀವನದಲ್ಲಿ ಅಪಾರ ಶಿಷ್ಯವೃಂದವನ್ನು ಹೊಂದಿದ್ದು ಹಲವಾರು ರಾಷ್ಟ್ರ ಹಾಗೂ ರಾಜ್ಯ ಪ್ರಶಸ್ತಿಗಳಿಂದ ಪುರಸ್ಕೃತರಾಗಿ ಸಾವಿರಾರು ಶಿಷ್ಯರ ಅಚ್ಚುಮೆಚ್ಚಿನ ವಿದ್ಯಾಗುರುಗಳಾಗಿದ್ದರು.

ಜನವರಿ–ಮಾರ್ಚ್ 2017ರ 'ಬೃಹಚ್ಚರಣ' ಪತ್ರಿಕೆಯ ಸಂಚಿಕೆಯಲ್ಲಿ 'ಕರ್ಮಯೋಗಿ ಶ್ರೀ ಬಿ.ಎಸ್.ಪಿ.' ಎಂಬ ಲೇಖನ ಪ್ರಕಟವಾಗಿದೆ.

ಬಿ.ಎಸ್.ಪಿ.ಯವರ ಮಕ್ಕಳಾದ ಶ್ರೀಯುತರಾದ ಶ್ರೀನಿವಾಸಮೂರ್ತಿ, ಶ್ರೀಧರ್‌ಮೂರ್ತಿ, ಸೌ॥ ಸರಸ್ವತಿ, ಸೌ॥ ವಸಂತರವರು ಸಂಘದ ಸದಸ್ಯರಾಗಿರುವುದು ಸಂತೋಷದ ವಿಷಯ.

–ಸಂ.

**ಆತ್ಮೀಯರೇ,**

ಸಮುದಾಯದ ಸದಸ್ಯರೆಲ್ಲರಿಗೂ ನಮಸ್ಕಾರಗಳು. ಸಂಘವು ಹಮ್ಮಿಕೊಳ್ಳುತ್ತಿರುವ ಪ್ರತಿ ಕಾರ್ಯಕ್ರಮದಲ್ಲೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನಿಮ್ಮ ಸಹಕಾರವಿರುವುದಕ್ಕೆ ಧನ್ಯವಾದಗಳು. ಮಕರ ಸಂಕ್ರಾಂತಿ, ಗಣರಾಜ್ಯೋತ್ಸವ, ಮಹಾಶಿವರಾತ್ರಿ, ನಾಗಾರಾಧನೆ, ಹೋಳಿಹಬ್ಬ, ಚಂದ್ರಮಾನ ಯುಗಾದಿ ಹಬ್ಬಗಳಿಗೆ ತಮಗೂ, ತಮ್ಮ ಕುಟುಂಬವರ್ಗಕ್ಕೂ ಸಂಘ ಶುಭ ಹಾರೈಸುತ್ತದೆ.

**ದಿನಾಂಕ 28–02–2020ರಂದು ನಾಗೇಶ್ವರ ಕ್ಷೇತ್ರದಲ್ಲಿ ನಡೆಯಲಿರುವ ನಾಗಾರಾಧನೆ** ಕಾರ್ಯಕ್ರಮದಲ್ಲಿ ತಾವು ಕುಟುಂಬ ಸಮೇತರಾಗಿ ಭಾಗವಹಿಸಬೇಕೆಂದು ಸಂಘದ ಬಿನ್ನಹ.

ಹೊಸ ಸದಸ್ಯರಿಗೆ ಸ್ವಾಗತ.

**ಶುಭಾಶಯಗಳು**

**ಎಸ್.ಸಿ. ಶ್ರೀನಿವಾಸ**
ಕಾರ್ಯದರ್ಶಿಗಳು
ಎಂ.ಎಂ.ಡಿ.ಬಿ.ಎಸ್.



ಹನುಮಜಯಂತಿ ವಿಶೇಷ

# ಆಂಜನೇಯನ ಗರ್ವಭಂಗ



'ಆಂಜನೇಯನು ಸಮುದ್ರ ಲಂಘನ, ಸೀತಾಮಾತ ಸಂದರ್ಶನ, ಅಕ್ಷಕುಮಾರನೇ ಮೊದಲಾದ ರಾಕ್ಷಸರ ಸಂಹಾರ, ಲಂಕಾದಹನ ಮುಂತಾದ ಮಹತ್ಕಾರ್ಯಗಳ ಸಾಧಿಸಿದನು. ಮಾತಾ ಸೀತಾದೇವಿಯ ಅನುಮತಿ ಪಡೆದು ಹಿಂದಿರುಗುವಾಗ ತಾನು ಮಹತ್ಕಾರ್ಯವನ್ನು ಸಾಧಿಸಿಬಿಟ್ಟೆನೆಂಬ ಗರ್ವವು ಹೃದಯವನ್ನು ಹೊಕ್ಕಿತು. ಶ್ರೀರಾಮನಿಗೆ ತನ್ನ ಭಕ್ತನಿಗೆ ಕುಂದುಬರುವುದು ಸಹ್ಯವಾಗಲಿಲ್ಲ. ಗರ್ವ ಅಂಕುರಾವಸ್ಥೆಯಲ್ಲಿ ಮೂಲೋತ್ಪಾಟನೆ ಮಾಡಿ ಭಕ್ತನನ್ನು ರಕ್ಷಿಸಬೇಕೆಂದು ಕೃಪಾನಿಧಿ ಶ್ರೀರಾಮನು ಸಂಕಲ್ಪಿಸಿದ.

ಶ್ರೀ ಮಾರುತಿಯು ಪುನಃ ಸಮುದ್ರವನ್ನು ಹಾರಿ ಕಪಿ ಸೈನ್ಯವಿರುವ ಸ್ಥಳ ದಾಟಿ ಉತ್ತರ ಭೂಮಿಯನ್ನು ಮುಟ್ಟಿದನು. ಸುತ್ತಲೂ ನೋಡಿದ. ಸ್ವಲ್ಪ ದೂರದಲ್ಲಿ ಓರ್ವ ಋಷಿಯನ್ನು ಕಂಡನು. ತನ್ನ ಕಾರ್ಯ ಸಾಧನೆ ಹೇಳಿ ಹೊಗಳಿಸಿಕೊಳ್ಳಬೇಕೆಂದು ಆಸೆ ಹುಟ್ಟಿತು.

"ಮುನೀಶ್ವರರೇ, ನಾನು ರಾಮ ಕಾರ್ಯ ಸಾಧಿಸಿ ಬಂದಿದ್ದೇನೆ. ನನಗೆ ಬಾಯಾರಿಕೆ ಆಗಿದೆ, ನೀರು ಬೇಕು. ನೀರಿನ ಸ್ಥಳ ತೋರಿಸಿ" ಎಂದನು. ಋಷಿಯು ಮೌನವಾಗಿ ಕೈಸನ್ನೆಯಿಂದ ತಟಾಕವಿರುವ ಸ್ಥಳ ತೋರಿದ. ಮಾರುತಿ ಚೂಡಾಮಣಿ ರಾಮಾಂಗಳೀಯಕವನ್ನು ಋಷಿಯ ಮುಂದೆ ಇಟ್ಟು ತಟಾಕಕ್ಕೆ ಹೋದನು. ಅಷ್ಟರಲ್ಲಿ ಒಂದು ಕಪಿಯು ಬಂದು ಉಂಗುರವನ್ನು ಋಷಿಯ ಕಮಂಡಲದಲ್ಲಿ ಹಾಕಿತು. ಮಾರುತಿ ಧಾವಿಸಿ ಬಂದು ಚೂಡಾಮಣಿ, ಪತ್ರ ತೆಗೆದುಕೊಂಡ. ಉಂಗುರ ಕಾಣಲಿಲ್ಲ. ಉಂಗುರವೆಲ್ಲಿ? ಎಂದು ಋಷಿಯನ್ನು ಕೇಳಿದ. ಋಷಿ ಸಂಜ್ಞೆಯಿಂದ ಕಮಂಡಲವನ್ನು ತೋರಿದ.

ಕಮಂಡಲುವಿನಲ್ಲಿ ಮಾರುತಿ ನೋಡಿದಾಗ ಸಾವಿರಾರು ಉಂಗುರಗಳಿದ್ದವು. ಆಶ್ಚರ್ಯದಿಂದ ಇಷ್ಟು ಉಂಗುರಗಳು ಎಲ್ಲಿಂದ ಬಂದವು? ಇವುಗಳಲ್ಲಿ ನನ್ನ ಉಂಗುರವಾವುದು? ಎಂದು ಋಷಿಯನ್ನು ಕೇಳಿದನು. ಆಗ ಋಷಿಯು ಇಂತೆಂದನು. "ಯಾವಾಗ ರಾಮಾಜ್ಞೆಯಿಂದ ವಾಯುಪುತ್ರರು ಸೀತಾನ್ವೇಷಣಕ್ಕಾಗಿ ಲಂಕೆಗೆ ಹೋಗಿ ಹಿಂದಿರುಗುತ್ತಾರೋ ಆಗಾಗ ಅವರೆಲ್ಲರೂ ನನ್ನ ಎದುರಿನಲ್ಲಿ ಉಂಗುರವಿಟ್ಟು ಹೋಗುತ್ತಾರೆ. ಆಗ ಕಪಿಗಳಿಂದ ಉಂಗುರ ಕಮಂಡಲುವಿನಲ್ಲಿ ಹಾಕಲ್ಪಡುತ್ತೆ. ಇದೆಲ್ಲಾ ಹಿಂದಿನ ಆಂಜನೇಯ ತಂದ ಉಂಗುರುಗಳು. ಇವುಗಳಲ್ಲಿ ನಿನ್ನ ಉಂಗುರ ಯಾವುದೋ ನೀನೆ ಆರಿಸಿಕೊ."

ಈ ಮಾತು ಕೇಳಿ ಮಾರುತಿಯ ಗರ್ವ ಅಡಗಿತು. "ಇದುವರೆಗೆ ಎಷ್ಟು ರಾಮರು ಬಂದಿರುತ್ತಾರೆ?" ಎಂದು ಕೇಳಿದ. ಋಷಿ "ನೀನೆ ಉಂಗುರಗಳನ್ನು ಎಣಿಸಿಕೋ" ಎಂದನು. ಮಾರುತಿ ಕಮಂಡಲುವಿನೊಳಗೆ ಕೈಹಾಕಿ ಉಂಗುರಗಳನ್ನು ಎತ್ತಿ ಎತ್ತಿ ಹೊರಗಿಡುತ್ತಾ ಬಂದನು. ಆದರೆ ಉಂಗುರಗಳ ಅಂತ್ಯವೇ ಕಾಣಲಿಲ್ಲ. ಮತ್ತೆ ಉಂಗುರ ರಾಶಿ ಅಲ್ಲೇ ಹಾಕಿ ಋಷಿಯನ್ನು ವಂದಿಸಿ ಮನದಲ್ಲಿ ಯೋಚಿಸಿದ. ನನ್ನಂಥವರು ಸಾವಿರಾರು ಮಂದಿ ಸೀತಾಮಾತೆಯನ್ನು ಕಂಡೆನೆಂದು ವಾರ್ತೆ ಹೇಳಿರುತ್ತಾರೆ. ನಾನೊಂದು ಲೆಕ್ಕವೇ? ಈ ಸೇವೆ ಸಲ್ಲಿಸುವ ಭಾಗ್ಯ ಶ್ರೀರಾಮನಿಂದ ದೊರೆಯಿತು. ನಾನು ಪುನೀತನಾದೆ. ಗರ್ವ ಅಡಗಿದ ಮಾರುತಿ ದಕ್ಷಿಣ ದಿಕ್ಕಿಗೆ ಹೋಗಿ ಸಮುದ್ರ ತೀರದಲ್ಲಿ ಅಂಗದಾದಿಗಳನ್ನು ಸಂದರ್ಶಿಸಿದನು.

ಸೀತೆಯನ್ನು ಕಂಡ ಸುದ್ದಿಯನ್ನು ತಿಳಿಸಿ ಆನಂದ ಪರವಶನಾಗಿ ಮಧುವನವನ್ನು ಹೊಕ್ಕು ಹಣ್ಣುಗಳನ್ನು ತಿಂದು ತೃಪ್ತಿಹೊಂದಿ ರಾಮನಲ್ಲಿ ಬಂದು ಸಂತೋಷದ ವರ್ತಮಾನ ತಿಳಿಸಿದನು. ಸೀತೆಯನ್ನು ಕಂಡದ್ದಲ್ಲದೆ ಬ್ರಹ್ಮ ದೇವನಿತ್ತ ಪತ್ರ, ಚೂಡಾಮಣಿ, ಕಾಕಾಸುರ ವೃತ್ತಾಂತವನ್ನು ಸಹ ತಿಳಿಸಿದನು. ಶ್ರೀರಾಮ ಸಂತೋಷದಿಂದ ತನ್ನ ಆಲಿಂಗನದಿಂದ ಮಾರುತಿಯನ್ನು ಸತ್ಕರಿಸಿದ. "ನಿನ್ನ ಉಪಕಾರ ಮಹತ್ತರವಾದದ್ದು. ತಕ್ಕ ಪ್ರತ್ಯುಪಕಾರ ಮಾಡುವ ಸಾಮರ್ಥ್ಯ ನನಗಿಲ್ಲ" ಎಂದು ರಾಮನು ಹೇಳಿದನು. ಮಾರುತಿ ಭಯದಿಂದ ನಡುಗುತ್ತಾ, "ಪ್ರಭೋ, ನಾನು ಅಪರಾಧ ಮಾಡಿರುತ್ತೇನೆ" ಎಂದು ಉಂಗುರ ವೃತ್ತಾಂತ, ಋಷಿಯ ಮಾತನ್ನು ಅರಿಕೆ ಮಾಡಿಕೊಂಡನು. ಶ್ರೀರಾಮನು ಮಂದಹಾಸದಿಂದ ನಿನಗೆ ಬಂದ ಗರ್ವ ನಿವಾರಿಸಲು ನಾನೆ ಋಷಿ ರೂಪ ಧರಿಸಿ ಕೌತುಕ ತೋರಿದೆನು. ಉಂಗುರ ನನ್ನ ಬೆರಳಿನಲ್ಲಿಯೇ ಇದೆ ಎಂದು ತೋರಿದನು. ಶ್ರೀರಾಮನ ಬೆರಳಿನ ಉಂಗುರ ಕಂಡು ವಂದಿಸಿ ಸಾಕ್ಷಾತ್ ಪರಬ್ರಹ್ಮನೇ ರಾಮ ಎಂದು ತಿಳಿದು ತನ್ನ ಪೌರುಷ ದೈವ ಕೃಪೆ ಎಂದು ಮನಗಂಡನು.



◆ ಭ್ರಮರಾ ಗೋಪಿನಾಥ್
6366701153

## ಶಿಸ್ತಿನ ಸಿಪಾಯಿ ನನ್ನಪ್ಪ...



**ಅ**ಪ್ಪನ ಬಗ್ಗೆ ಬರೆಯುವಾಗ ಸಾವಿರಾರು ವಿಷಯಗಳು ತಲೆಗೆ ಬಂದು ನುಗ್ಗಿದರೂ ಲೇಖನಿ ಕೈಯ್ಯಲ್ಲಿರುವಾಗ ಇಂದು ಅವರು ನಮ್ಮೊಂದಿಗಿಲ್ಲವೆಂದು ಕಣ್ಣು ಮಂಜಾಗುತ್ತದೆ. ತಂದೆ ಪ್ರೀತಿಯ ಬಗ್ಗೆ, ಪಾಲನೆ–ಪೋಷಣೆ ಬಗ್ಗೆ, ಅಕ್ಕರೆ, ಮಮತೆ ಒಂದಾ, ಎರಡಾ, ಬರೆಯಲು ಪದಗಳೇ ತೋಚುತ್ತಿಲ್ಲ. ನನ್ನ ಮತ್ತು ನನ್ನ ತಂದೆಯವರ ನಡುವಿನ ಬಾಂಧವ್ಯವನ್ನು ಬರೆಯಲು ನನಗೆ ಇಷ್ಟವಾದರೂ ಬಹಳ ಕಷ್ಟವೆನಿಸುತ್ತದೆ.

ನನಗೆ ನನ್ನಪ್ಪ ಎನ್ನುವುದಕ್ಕಿಂತ ಮಿಗಿಲಾಗಿ ಒಬ್ಬ ಹಿತಚಿಂತಕರಾಗಿ, ಮಾರ್ಗದರ್ಶಿಯಾಗಿ ಹಾಗೂ ನನ್ನ ಎಲ್ಲಾ ಭಾವನೆಗಳಿಗೆ ಸ್ಪಂದಿಸುವ ಒಳ್ಳೆಯ ಸ್ನೇಹಿತನಂತೆ ಇದ್ದರು ಎಂದು ಹೇಳಿದರೆ ತಪ್ಪಾಗಲಾರದು. ಪ್ರತಿದಿನ ನನ್ನ ಒಡನಾಟ ಅವರೊಂದಿಗೆ ಸುಮಾರು ನಾಲ್ಕು ಗಂಟೆಗಳ ಕಾಲ ಮಾತ್ರ. ಆ ಸಮಯದಲ್ಲಿ ಅವರು ಸಾಕಷ್ಟು ವಿಷಯಗಳನ್ನು ನನ್ನೊಡನೆ ಚರ್ಚಿಸುತ್ತಿದ್ದರು ಹಾಗೂ ನಾನು ಅವರ ಕೆಲವು ವಿಷಯಗಳನ್ನು ಒಪ್ಪದೇ ಹೋದಲ್ಲಿ ಅದಕ್ಕೆ ಸರಿಯಾದ ವಿಮರ್ಶೆ ಸಹ ಮಾಡುತ್ತಿದ್ದುದು ಉಂಟು. ಅವರಿಗೆ ಯಾವಾಗಲೂ ಕೆಲಸ ಮಾಡುವುದೇ ಪ್ರೀತಿ. ಹಲವಾರು ಸಂದರ್ಭಗಳಲ್ಲಿ ಸೋಮಾರಿತನ ಒಳ್ಳೆಯದಲ್ಲ ಎಂದು ಹೇಳುತ್ತಿದ್ದರು.

ಮುಖ್ಯವಾಗಿ ಅವರು ಶಿಸ್ತಿನ ಸಿಪಾಯಿ ಮತ್ತು ಯಾವ ಸಮಾರಂಭವಾಗಲೀ, ಮೀಟಿಂಗ್‌ಗಳಾಗಲೀ ಸರಿಯಾದ ಸಮಯಕ್ಕೆ ಹೋಗದಿದ್ದರೆ ತುಂಬಾ ಬೇಸರಪಡುತ್ತಿದ್ದರು.

ನಿಮಗೆಲ್ಲಾ ತಿಳಿದಿರುವಂತೆ ಅವರಿಗೆ "ಲೆಕ್ಕ ಶಾಸ್ತ್ರದ ಬ್ರಹ್ಮ" "ಲೆಕ್ಕ ಶಾಸ್ತ್ರದ ಭೀಷ್ಮ" ಹಾಗೂ ಎಂಬ ಬಿರುದುಗಳು ಬಂದಿವೆ. ಎಲ್ಲಕ್ಕಿಂತ ಮಿಗಿಲಾಗಿ ಅವರು ಸಹೃದಯಿ. ಹೀಗೆ ಹೇಳುತ್ತಾ ಹೋದರೆ ಬೇಕಾದಷ್ಟಿದೆ. ಆದರೆ ಬರೆಯಲು ಸಾಧ್ಯವಾಗುತ್ತಿಲ್ಲ ಕ್ಷಮಿಸಿ. ಕಡೆಯದಾಗಿ ಈ ದಿನ ನಾನು ಇಲ್ಲಿಯವರೆಗೆ ಬಂದು ನಿಂತಿರುವುದಕ್ಕೆ ಮೂಲಕಾರಣ ಕರ್ತರು ನನ್ನ ಪ್ರೀತಿಯ ಅಪ್ಪ. "ಅಪ್ಪ ನಿಮ್ಮ ಕೆಲವು ಆದರ್ಶಗಳನ್ನು ಪಾಲಿಸಲು ಖಂಡಿತವಾಗಿ ಪ್ರಯತ್ನಿಸುತ್ತೇನೆ."

ಸಂಘವು **'ಬೃಹಚ್ಚರಣ'** ಸಂಚಿಕೆಯನ್ನು ನಮ್ಮ ತಂದೆಯವರಿಗೆ **'ಅರ್ಪಣೆ'** ಮಾಡುತ್ತಿರುವುದು ಶ್ಲಾಘನೀಯ ಹಾಗೂ ನಮ್ಮ ಕುಟುಂಬದ ವತಿಯಿಂದ ವಂದನೆಗಳು.

ಪ್ರೀತಿಯ ಮಗಳು
**ಸರಸ್ವತಿ**

## ಚತುರ ಪಂಡಿತ

**ಮು**ಸಲ್ಮಾನ ದೊರೆಯು ಆಜ್ಞೆ ಮಾಡಿದ...

ಈ ಹಿಂದೂಗಳು ಪಂಚಾಂಗ ಎಂಬ ಪುಸ್ತಕದಲ್ಲಿ ಗ್ರಹಣ, ಹವಾಮಾನ, ಮಳೆ–ಬೆಳೆ, ಎಲ್ಲಾ ಅಂತರಿಕ್ಷದ ವಿಚಾರಗಳು ಹೇಳುವಲ್ಲಿ ನಿಪುಣರು. ಆದರೆ. ಪ್ರವಾಹ, ಭೂಕಂಪ ವಿಚಾರ ಹೇಳುವುದಿಲ್ಲ, ಏಕೆ? ಇದರಲ್ಲಿ ಏನೋ ಮೋಸ ಅಡಗಿದೆ. ಇದನ್ನು ಹಿಂದೂಗಳಲ್ಲಿ ಕೇಳಿ, ವಿಚಾರ ತಿಳಿಯಬೇಕು ಎಂದು ಒಂದು ಆಜ್ಞೆ ಹೊರಡಿಸಿದ.

"ನೀವು ಹಿಂದೂಗಳು, ಪಂಡಿತರು, ಖಗೋಳಶಾಸ್ತ್ರ ತಿಳಿದವರು ನಮ್ಮ ಆಸ್ಥಾನಕ್ಕೆ ಬಂದು ತಿಳಿಯಪಡಿಸಬೇಕು. ಇಲ್ಲದಿದ್ದರೆ ಶಿರಚ್ಛೇದನ ಆಗುತ್ತದೆ. ಇದು ರಾಜಾಜ್ಞೆ" ಎಂದು ಡಂಗುರ ಸಾರಿದನು. ಹಿಂದೂಗಳು ರಾಜಾಜ್ಞೆಗೆ ಹೆದರಿದರು. ಮರುದಿವಸ ಶಾಸ್ತ್ರ ತಿಳಿದವರು, ಪಂಡಿತರು ಹೋದರು. ರಾಜ್ಯಸಭೆಗೆ ಯಾರೂ ಸರಿಯಾಗಿ ಉತ್ತರಿಸಲಿಲ್ಲ ಎಂದ ರಾಜ ಪಂಡಿತರನ್ನೆಲ್ಲಾ ಬಂಧಿಸಿದ. ಇನ್ನೂ ತಿಳಿದವರು ಇದ್ದರೆ ಬನ್ನಿ ಎಂದು ಒಂದು ದಿನ ಅವಧಿ ವಿಸ್ತರಿಸಿದ. ಈ ವರ್ತಮಾನ ಊರೆಲ್ಲಾ ಹರಡಿತು. ಓರ್ವ ಚತುರ ಬ್ರಾಹ್ಮಣ ಬಂದು ನಿಮ್ಮ ಪ್ರಶ್ನೆಗೆ ಉತ್ತರಿಸುವೆ. ಆದರೆ ಒಂದು ಕರಾರು. ನನ್ನ ಉತ್ತರ ಸರಿ ಕಂಡಲ್ಲಿ ಬಂಧಿತರನ್ನು ಬಿಡುಗಡೆ ಮಾಡಬೇಕು ಎಂದ. ಅದಕ್ಕೆ ದೊರೆ ಒಪ್ಪಿದ. ಬ್ರಾಹ್ಮಣ ಹೇಳಿದ ನೋಡಿ, ನಮ್ಮ ಹಿಂದೂಗಳಲ್ಲಿ ಸತ್ತ ನಂತರ ಅಗ್ನಿಸ್ಪರ್ಶ ಮಾಡಿ ಮೇಲಿನ ಲೋಕಕ್ಕೆ ಕಳುಹಿಸುತ್ತೇವೆ ಅವರು ಆಕಾಶಕ್ಕೆ ಸಂಬಂಧಪಟ್ಟ ವಿಚಾರ ತಿಳಿಸುತ್ತಾರೆ. ಆದರೆ ನಿಮ್ಮಲ್ಲಿ ಸತ್ತ ನಂತರ ಹೂಳುತ್ತಾರೆ. ಸತ್ತ ದೇಹಗಳು ಒಟ್ಟಾಗಿ ಭೂತ–ಪ್ರೇತಗಳಾಗಿ ಭೂಮಿಯನ್ನು ಅಲುಗಾಡಿಸುತ್ತಾರೆ. ಆಗ ಭೂಕಂಪನ ಆಗುತ್ತದೆ. ನಿಮಗೆ ಮೇಲಿನ ವಿಚಾರ ಗೊತ್ತಿಲ್ಲ. ನಮಗೆ ಕೆಳಗಿನ ವಿಚಾರ ತಿಳಿಯಲಿಲ್ಲ. ನಿಮ್ಮವರನ್ನು ಕರೆಸಿ ವಿಚಾರಿಸಿ ನೀವೇ ನಮಗೆ ವಿಷಯ ತಿಳಿಸಬೇಕು" ಎಂದು ವಿನಯದಿಂದ ಹೇಳಿದ. ಊರ್ಧ್ವಲೋಕದವರಿಗೆ ಅಧೋಲೋಕ ವಿಚಾರ ಗೊತ್ತಿಲ್ಲ ಸರಿಯಾಗಿದೆ ಉತ್ತರ. ನಮ್ಮವರು ಯಾಕೆ ವಿಚಾರ ತಿಳಿಸಿಲ್ಲ. ಇದು ಯೋಚಿಸಬೇಕಾದ ವಿಷಯ ಎಂದು ತಿಳಿದು ಪಂಡಿತರನ್ನೆಲ್ಲಾ ಬಿಡುಗಡೆ ಮಾಡಿದ. ಅವರೆಲ್ಲಾ ಬದುಕಿದೆಯಾ ಬಡ ಜೀವವೇ ಎಂದು ಚತುರನಿಗೆ ವಂದಿಸಿ ಆನಂದದಿಂದ ಹೊರಟರು.

**ಕೋಟಿ ಅಪಾಯಗಳಿಗೆ ಉಪಾಯ ಒಂದೇ ಮದ್ದು.** ಆದರೂ ದೊರೆಗೆ ಇನ್ನೂ ಭೂಕಂಪ ಪ್ರಳಯದ ವಿಚಾರ ಯಾರೂ ತಿಳಿಸಿಲ್ಲ. ಪ್ರಶ್ನೆ ಪ್ರಶ್ನೆಯಾಗೆ ಉಳಿದಿದೆ.

◆ **ಭ್ರಮರಾ ಗೋಪಿನಾಥ್**

# ಮಹಾ ಮೃತ್ಯುಂಜಯ ಮಂತ್ರ

ಬಹುತೇಕರು ಮೃತ್ಯುಂಜಯ ಮಹಾ ಮಂತ್ರವನ್ನು ಪ್ರತಿದಿನ ಪಠಿಸುವ ಅಭ್ಯಾಸ ರೂಢಿಸಿಕೊಂಡಿರುವುದು ಉತ್ತಮ ಮಾರ್ಗವೇ ಸರಿ. ಅದನ್ನು ಬೆಳಗಿನ ಜಾವ ಅಥವಾ ರಾತ್ರಿ ಮಲಗುವ ಮೊದಲು ಕನಿಷ್ಠ ಹನ್ನೊಂದು ಬಾರಿ ಪಠಿಸುವುದು ಸಾಮಾನ್ಯ ಕ್ರಮ. ಈ ಮಂತ್ರವನ್ನು ಪಠಿಸುವುದು ಮಾಡುವುದು ಒಂದು ಭಾಗವಾದರೆ, ಅದರ ಅರ್ಥ ತಿಳಿದು ಪಠಿಸುವುದು ಮತ್ತೊಂದು ಭಾಗ, ಇದರಿಂದ ಮನಸ್ಸಿಗೆ ಹೆಚ್ಚು ನೆಮ್ಮದಿ ಮತ್ತು ಫಲವೂ ಅಧಿಕ.

**ಓಂ ತ್ರಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿ ವರ್ಧನಂ।**
**ಊರ್ವಾರು ಕಮಿವ ಬಂಧನಾತ್ ಮೃತ್ಯೋರ್ಮುಕ್ಷೀಯ ಮಾಮೃತಾತ್ ॥**

ಮೃತ್ಯುಂಜಯ ಮಂತ್ರದಲ್ಲಿ ಬರುವ 'ಉರ್ವಾರು' (ಸೌತೆಕಾಯಿಯ) ಸಂಬಂಧ ಹೇಗೆ ಎಂಬುದನ್ನು ತಿಳಿಯೋಣ.

**ಓಂ = ಪ್ರಣವ**
**ತ್ರಯಂಬಕಂ = ಮೂರು ಕಣ್ಣಿನ ಪರಮೇಶ್ವರನೇ...**
**ಯಜಾಮಹೇ = ಪೂಜನೀಯನೇ...**
**ಸುಗಂಧಿಂ = ಸುಗಂಧದಿಂದ ಕೂಡಿದ,**
**ಪುಷ್ಟಿ ವರ್ಧನಂ = ಇಷ್ಟ ಕಾಮ್ಯ, ಆರೋಗ್ಯವು ವೃದ್ಧಿಯಾಗಲಿ**

ಊರ್ವಾರು+ಕಮಿವ+ಬಂಧನಾನ್ = (ಊರ್ವಾರು ಕಮಿವ ಬಂಧನಾನ್) = ಹೇಗೆ ಸೌತೆಕಾಯಿಯ ತೊಟ್ಟು ತನ್ನ ಬಳ್ಳಿಯೊಂದಿಗೆ ಬಹಳ ಸೂಕ್ಷ್ಮವಾಗಿ ಅಂಟಿಕೊಂಡಿರುತ್ತದೆಯೋ ಆ ರೀತಿಯಲ್ಲಿ.....

ಮೃತ್ಯೋರ್ಮುಕ್ಷೀ=ಅಂತಹ ಮೃತ್ಯುವಿನಿಂದ, ಮುಕ್ತಿ ದೊರೆಯಲಿ.

ಮಾಮೃತಾತ್=ಅಮೃತತ್ವವನ್ನು ಪಡೆಯುವಂತಾಗಲಿ.

ಇಲ್ಲಿ **"ಊರ್ವಾರು ಕಮಿಕ"** ಬಂಧನದ ಬಗ್ಗೆ ಸ್ವಲ್ಪ ಹೆಚ್ಚಿನ ವಿವರಣೆಯ ಅಗತ್ಯವಿದೆ. ಆ ಅದ್ಭುತ ವಿವರಣೆಯನ್ನು ನೋಡೋಣ.

ಪರಶಿವನೇ.... ಈ ಜಗತ್ತಿನೊಂದಿಗೆ ನಮ್ಮ ಬಂಧನವು ಹೇಗಿರಬೇಕು ಎಂದರೆ, ಸೌತೆಕಾಯಿಯು ತನ್ನ ಬಳ್ಳಿಯೊಂದಿಗೆ ಎಷ್ಟು ಸೂಕ್ಷ್ಮವಾಗಿ ಅಂಟಿಕೊಂಡಿರುತ್ತದೆಯೋ, ಅದೇ ರೀತಿಯಲ್ಲಿ ಈ ಲೌಕಿಕ ಜಗತ್ತಿನೊಂದಿಗಿನ ನಮ್ಮ ಬಂಧನವು ಸಾಕು ಎಂಬ ಅರ್ಥ ಅದ್ಭುತ. ಅದು ಹೇಗೆಂಬುದನ್ನು ನೋಡೋಣ. ನಾವು ಇಲ್ಲಿ ಗಮನಿಸಬೇಕಾದದ್ದು, ಗಿಡದ ಬಳ್ಳಿಯಿಂದ ಬೆಳೆಯುವ ಕುಂಬಳಕಾಯಿ, ಸೋರೇಕಾಯಿ, ಹೀರೇಕಾಯಿ ಮುಂತಾದವುಗಳಿಗೂ ಮತ್ತು ಅದೇ ರೀತಿ ಬಳ್ಳಿಯಿಂದ ಬೆಳೆಯುವ ಸೌತೆಕಾಯಿಗೂ ಕಾಣುವ ವ್ಯತ್ಯಾಸ ಬಗ್ಗೆ ಸೂಕ್ಷ್ಮವಾಗಿ ಗಮನಿಸಿದಾಗ...!



1. ಸೌತೆಕಾಯಿಯನ್ನು ಗಿಡದ ಬಳ್ಳಿಯಿಂದ ಬೇರ್ಪಡಿಸುವಾಗ, ಕಾಯಿಯ ಜೊತೆ ಬಳ್ಳಿಯ ತೊಟ್ಟು ಅಂಟಿಕೊಂಡು ಬರುವುದಿಲ್ಲ, ಅದು ಗಿಡದ ಬಳ್ಳಿಯೊಂದಿಗೆ ಗಿಡದಲ್ಲೇ ಉಳಿಯುತ್ತದೆ.

2. ಆದರೆ, ಬಳ್ಳಿಯಿಂದ ಬೆಳೆಯುವ ಕುಂಬಳಕಾಯಿ, ಸೋರೇಕಾಯಿ, ಹೀರೇಕಾಯಿ ಮುಂತಾದವುಗಳು ಬಳ್ಳಿಯ ತೊಟ್ಟು ಕಾಯಿಯೊಂದಿಗೆ ಗಟ್ಟಿಯಾಗಿ ಅಂಟಿಕೊಂಡಿರುವುದನ್ನು ನಾವು ಗಮನಿಸಿದ್ದೇವೆ.

3. ಗಿಡದ ಬಳ್ಳಿಯಿಂದ ಉತ್ಪತ್ತಿಯಾದ ತರಕಾರಿಗಳನ್ನು ಮಾರುಕಟ್ಟೆಯಿಂದ ತರುವಾಗ ಕುಂಬಳಕಾಯಿ, ಹೀರೇಕಾಯಿ, ಸೋರೇಕಾಯಿ ಮುಂತಾದವುಗಳು ತೊಟ್ಟಿನ ಸಮೇತ ಕೊಳ್ಳುತ್ತೇವೆ. ಆದರೆ ತೊಟ್ಟಿನೊಂದಿಗೆ ಇರುವ ಸೌತೆಕಾಯಿ ಮಾರುಕಟ್ಟೆಯಲ್ಲಿ ದೊರೆಯುವುದು ಅತಿ ವಿರಳ!

ಕಾರಣ? ಸೌತೆಕಾಯಿ ಮತ್ತು ಅದರ ಗಿಡದ ಬಳ್ಳಿಯ ಸಂಬಂಧ ಬಹಳ ಸೂಕ್ಷ್ಮ. ಸೌತೆಕಾಯಿಯನ್ನು ಗಿಡದ ಬಳ್ಳಿಯಿಂದ ಬೇರ್ಪಡಿಸುವ ಸಮಯದಲ್ಲಿ, ಕಾಯಿಯೊಂದಿಗೆ ಅಂಟಿಕೊಂಡಿದ್ದ ಅದರ ತೊಟ್ಟು ಬಳ್ಳಿಯಲ್ಲೇ ಉಳಿಯುತ್ತದೆ ಎನ್ನುವ ಅದ್ಭುತವಾದ ವಿವರಣೆ. ಅದೇ ರೀತಿಯಲ್ಲಿ ಲೌಕಿಕ ಜಗತ್ತಿನ ನಮ್ಮ ಬಂಧನಗಳು ಇರಬೇಕು ಎಂಬ ಸಂದೇಶ.

ಮೃತ್ಯುಂಜಯ ಮಂತ್ರವನ್ನು ಪ್ರತಿದಿನವೂ ಹೇಳುವುದು ಮೃತ್ಯುವನ್ನು ಜಯಿಸುವ ಕಾರಣಕ್ಕಾಗಿ ಅಲ್ಲ. ಮೃತ್ಯುವು ಸುಲಭವಾಗಿ, ರೋಗ ರುಜಿನಗಳಿಲ್ಲದೆ ಅನಾಯಾಸವಾಗಿ ಬರಲಿ ಎಂಬ ಅರ್ಥ. ಇದನ್ನೇ ಗುರು ದ್ರೋಣಾಚಾರ್ಯರೂ ಸಹಾ.... "ಅನಾಯಾಸೇನ ಮರಣಂ, ವಿನಾ ದೈನ್ಯೇನ ಜೀವನಂ, ದೇಹಿ ಮೇ ಕೃಪಯಾ ಶಂಭೋ ತ್ವಯಿ ಭಕ್ತಿಮಚಲಂ" ಎಂದು ತಿಳಿಸಿದ್ದು. ಮಾನವರಾಗಿ ಜನಿಸಿದ ನಾವು ಈ ಲೌಕಿಕ ಜಗತ್ತಿನೊಂದಿಗೆ ಅತಿ ಸೂಕ್ಷ್ಮವಾದ, ಕನಿಷ್ಠ ಮೋಹದ ಬದುಕನ್ನು ಆಯ್ಕೆ ಮಾಡಿಕೊಳ್ಳಬೇಕು. ಅತಿಯಾದ ಗಟ್ಟಿ ಬಂಧನಗಳಿಗೆ ಅಂಟಿಕೊಂಡಾಗ, ಅನುಭವಿಸುವ ನೋವೇ ಹೆಚ್ಚು, The less attached YOU are, the more peaceful YOU are. ಎನ್ನುವುದನ್ನು ಸರಳವಾಗಿ ವಿವರಿಸಲಾಗಿದೆ.

ಪ್ರತಿದಿನವೂ, ವಿಶೇಷವಾಗಿ ಸೋಮವಾರ, ಪರಶಿವನನ್ನು ನೆನೆಯಲು ಸೂಕ್ತವಾದ ದಿನ. **"ಹರ ಹರ ಮಹಾದೇವ, ಶಂಭೋ ಶಂಕರ."**



◆ ವಿ.ಎಸ್.ಮಣಿ
9845055582

## ಕಲ್ಯಾಣೋತ್ಸವಕ್ಕೆ ದೇಣಿಗೆ ನೀಡಿದ ಸೇವಾಕರ್ತರು (ರೂ.2500/–)

| | | | |
|---|---|---|---|
| **ಶ್ರೀಯುತರಾದ** | ಅರವಿಂದ್ (ಮಾನಸ) | ಎಸ್. ರವಿಕುಮಾರ್ | ಗೋವಿಂದ್ ಬಿ.ಇ. |
| ಎಸ್. ಅತ್ರೇಶ್ | ಜಿ. ಪದ್ಮನಾಭ | ಹೆಚ್. ವೆಂಕಟೇಶ್ | ಸೇತುರಾಮ್ ಶರ್ಮ |
| ವಿ. ಅಶೋಕ್ | ಭರತ್ ವಿಜಯ್ ಕೃಷ್ಣ | ಎನ್.ಎಸ್. ನಾಗರಾಜ್ | ಚಂದ್ರಶೇಖರ ಜಿ.ಎ. |
| ಆರ್.ಎನ್. ಮಂಜುನಾಥ್ | ಬಿ.ಇ. ರಮೇಶ್ | ಮೆಹುಲ್ ಎಸ್. | ವೆಂಕಟೇಶ್ ಶ್ರೀಕಾಂತಪ್ಪ |
| ಆರ್.ಎಸ್. ಗುರುಪ್ರಸಾದ್ | (ಎನ್. ಚಂದ್ರಶೇಖರಯ್ಯ) | ಮೇಘನ ಎಸ್. | ಉಮೇಶ್ |
| ಎಸ್.ಆರ್. ಬಾಲಸುಬ್ರಮಣ್ಯ | ಕೆ.ಎಸ್. ಶ್ರೀನಿವಾಸ್ | ಗೋಪಿ | ರವಿಕುಮಾರ (ಪದ್ಮಜ) |
| ಸಿ. ವೆಂಕಟೇಶ್ | ಕೆ. ಶ್ರೀಕಂಠೇಶ್ವರ | ಸುರೇಶ್ ಕೆ.ಬಿ. | ಬಿ.ಎನ್.ಜಿ. ಪ್ರಸಾದ್ |
| ಎಸ್.ಜಿ. ರಾಜೇಶ್ವರಿ | ಆರ್. ವೆಂಕಟೇಶ್ ಪ್ರಸಾದ್ | ನಾಗರಾಜ್ ಸಿ.ಎಸ್. | ಡಿ. ಮಂಜುನಾಥ್ |
| ಆರ್.ಎಸ್. ರಮೇಶ್ | ಎನ್.ವಿ. ಸೂರ್ಯಪ್ರಕಾಶ್ | ಈಶ್ವರನ್ ಎ. | ಆರ್.ಪಿ. ಉಮಾಶಂಕರ್ |
| ಎಸ್.ಆರ್. ವಿಜಯಕುಮಾರ್ | ಜಿ.ಎಸ್. ಸತ್ಯಮೂರ್ತಿ | ರಾಘವಪ್ರಸಾದ್ ಎಸ್.ಸಿ. | ರಂಜನ್ ಮೇಘ |
| ಶ್ರೀನಿವಾಸ ಆನಂದರಾವ್ | ಗೋಪಾಲ ಕೃಷ್ಣ ಆರ್. | ಅರುಣ್ | ಡಿ.ಆರ್. ಸ್ವಾಮಿನಾಥ್ |
| ಎಸ್. ವಿಶ್ವನಾಥ್ | ವಿ. ಸತೀಶ್ | ರಾಮು | ಬಿ.ಎಸ್. ಉಮಾ ಜಯರಾಮ್ |
| ವೆಂಕಟೇಶ್ ಪ್ರಸಾದ್ | ಎನ್. ಅಶ್ವತ್ | ರವಿಶಂಕರ್ ಎಂ.ಆರ್. | ಶಾಮ್ ಸುಂದರ್ ಆರ್.ಎ. |
| (ಕೆ.ಎಸ್.ಸುಂದರ್) | ಆರ್.ಎಸ್. ರವಿಕುಮಾರ್ | ಆರ್.ಎಸ್. ವೆಂಕಟೇಶ್ | |

## ಅನ್ನ ಸಂತರ್ಪಣಾ ನಿಧಿಗೆ ದೇಣಿಗೆ ನೀಡಿದ ದಾನಿಗಳು

| | | | | | |
|---|---|---|---|---|---|
| **ಶ್ರೀಯುತರಾದ** | | ಎಸ್. ನಾಗೇಶ್ | 1000/– | ಸುಮ ಪ್ರಹ್ಲಾದ್ | 1000/– |
| ಗಿರಿಜಾದೇವಿ | 1001/– | ಸರಸ್ವತಿ ನಟರಾಜ್ | 1000/– | ಕೃಷ್ಣಸ್ವಾಮಿ ಸಿ. | 500/– |
| ಸುಬ್ಬಲಕ್ಷ್ಮಿ | 2000/– | ಡಿ.ಎಸ್. ಭಾಸ್ಕರ್ | 1000/– | ಅಶೋಕ್ ಕುಮಾರ್ ಜಿ. | 1000/– |
| ಆರ್.ಎನ್. ಸ್ವಾಮಿನಾಥನ್ | 2000/– | ಕೆ. ಗುಂಡಪ್ಪ | 1000/– | ಚಂಪಕ್ ಟಿ.ಎಸ್. | 1000/– |
| ಎಸ್.ಎ. ಸತ್ಯಮೂರ್ತಿ | 2400/– | ಕೆ.ಬಿ. ಮುರಳಿ | 500/– | ಬಿ.ಎಸ್.ಸೂರ್ಯನಾರಾಯಣ್ | 5000/– |
| ಡಿ.ಎಂ. ಶೇಖರ್ | 2001/– | ಕೆ. ರಾಜಣ್ಣ | 2500/– | ದೇವಿ ಉಷಾ | 1000/– |
| ಪಾರ್ವತಿ ದೇವಿ | 101/– | ಸಿ. ಶ್ರೀಧರ್ | 1000/– | ಚಂದ್ರಮೌಳಿ | 500/– |
| ಕೆ. ಶ್ರೀಕಂಠೇಶ್ವರ | 2500/– | ರಾಮಸ್ವರೂಪ್ | 2000/– | ಎಚ್.ರಾಮನ್ ನರಸಿಂಹನ್ ರಾವ್ | 100/– |
| ಆರ್. ವೆಂಕಟೇಶ್ ಪ್ರಸಾದ್ | 2500/– | ಎ.ವಿ. ಮಂಜುನಾಥ್ | 1000/– | ಚಂದ್ರಶೇಖರ್ | 500/– |
| ಜಿ.ಎಸ್. ವೆಂಕಟೇಶ್ | 2000/– | ಆರ್. ರಾಧಾಕೃಷ್ಣ | 1000/– | ಡಿ.ಎಸ್. ಕೃಷ್ಣರಾವ್ | 500/– |
| ಪಾರ್ವತಿ ರಾಧಾಕೃಷ್ಣನ್ | 500/– | ಎಸ್. ಸತ್ಯನಾರಾಯಣ್ | 3000/– | ಅಥರ್ವ ಸುಬ್ರಮಣ್ಯಂ | 200/– |
| ಕೆ.ಎಸ್.ಅಶ್ವತ್ಥನಾರಾಯಣ ರಾವ್ | 4000/– | ಇಂದುಮೌಳಿ | 211/– | ಎಂ.ಆರ್. ಸತ್ಯನಾರಾಯಣ್ | 500/– |
| ಡಾ. ಶ್ರೀಧರ್ ರಾಮಚಂದ್ರನ್ | 3000/– | ಕೆ.ಎಸ್. ಅರುಣ್ | 1000/– | ಸುಂದರಮ್ಮ | 50/– |
| ಎಸ್.ಎಲ್. ರಾಜರಾಮ್ | 2000/– | ಕೆ.ಎಸ್. ಅರುಣ್ | 1000/– | ಆದಿತ್ಯ | 200/– |
| ಲೇಟ್ ಪದ್ಮಾವತಿ ಸೂರಪ್ಪ | 5000/– | ಕೆ.ಸಿ. ಶೇಖರ್ | 2500/– | ಕಾವ್ಯ ಮಲ್ಲೂರ್ | 500/– |
| ಮೀನಾಕ್ಷಿ ವೆಂಕಟಸುಬ್ಬಯ್ಯ | 1000/– | ಬಿ. ಸುಬ್ರಮಣ್ಯಂ | 2500/– | ಸುಂದರ್ ಜಿ. | 200/– |
| ಎಸ್. ರಮಾದೇವಿ | | ಆರ್.ಎಸ್. ರಮೇಶ್ | 1500/– | ಕೆ.ಜಿ. ಶ್ರೀನಿವಾಸ್ | 1000/– |
| ಗುರುಪ್ರಸಾದ್ | 1000/– | ಕೆ.ಎಸ್. ಶಿವಕುಮಾರ್ | 1001/– | ಸರಸ್ವತಿ | 501/– |
| ಎಸ್.ಸಿ. ಶ್ರೀನಿವಾಸ ಮತ್ತು | | ಕೆ. ವಿಜಯಲಕ್ಷ್ಮಿ | 1001/– | ಸುಬ್ಬರಾಯಪ್ಪ | 500/– |
| ಎಸ್.ಸಿ. ರಾಘವಪ್ರಸಾದ್ | 5400/– | ರಾಮಕೃಷ್ಣನ್ | 500/– | ಪದ್ಮರಾವ್ | 500/– |
| ಎಸ್. ವೆಂಕಟಗಿರಿಯಪ್ಪ | | ಕೆ.ಎಸ್. ನಾರಾಯಣಸ್ವಾಮಿ | 500/– | ಉದಯ್ ಕುಮಾರ್ | 501/– |
| ಮತ್ತು ಪುತ್ರರು | 5000/– | ಟಿ.ಪಿ. ಸೂರ್ಯನಾರಾಯಣ್ | 101/– | ಬಿ.ಎನ್. ಸೂರ್ಯನಾರಾಯಣ್ ರಾವ್ | 100/– |
| ಉಮಾ ಜಗದೀಶ್ | 2000/– | ವಿ. ಸುಬ್ರಮಣಿ | 500/– | ಎನ್. ಶ್ರೀನಿವಾಸ್ ಆನೇಕಲ್ | 1000/– |
| | | ಭಾನುಪ್ರಕಾಶ್ | 200/– | | |

# ಹತ್ತನೇ ವರ್ಷಕ್ಕೆ M.M.D.B.S

(ನೂತನ ಕಾರ್ಯಕಾರಿ ಸಮಿತಿ)












ದಿನಾಂಕ 3-10-2019 ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘವು ನೆನಪಿನಲ್ಲಿಡಬೇಕಾದ ದಿನ. ಏಕೆಂದರೆ ಒಂಬತ್ತು ವರ್ಷಗಳ ಹಿಂದೆ ಅಂದರೆ ದಿನಾಂಕ 3-10-2010ರಂದು ನಮ್ಮ ಸಂಘವನ್ನು ಪುನರುಜ್ಜೀವನ ಗೊಳಿಸಿದ ದಿನ. ಅಂದು ಸಂಘದ ಹಿತೈಷಿಗಳಾದ ದಿವಂಗತ ನಂಜುಂಡ ದೀಕ್ಷಿತರು ಮತ್ತು ಸಂಘಕ್ಕಾಗಿ ಶ್ರಮಿಸಿ ಹಾಗೂ ಸಂಘದ ಬೆಳವಣಿಗೆ ಬಗ್ಗೆ ದೂರದೃಷ್ಟಿ ಹೊಂದಿದ್ದ ಹಿರಿಯ ಸದಸ್ಯರಾದ ದಿವಂಗತ ಬಿ.ಎಸ್. ಪದ್ಮನಾಭ್, ಶ್ರೀ ಬಿ.ಎಸ್. ಸೂರ್ಯನಾರಾಯಣ, ಶ್ರೀ ಟಿ.ಎಸ್. ಕೃಷ್ಣನ್ ಮತ್ತು ಹಿಂದಿನ ಕಾರ್ಯದರ್ಶಿಯಾಗಿದ್ದ ಶ್ರೀ ಶ್ರೀನಿವಾಸಯ್ಯ, ಶ್ರೀ ಎಚ್. ಕೃಷ್ಣಸ್ವಾಮಿ, ಶ್ರೀ ಟಿ. ನಾರಾಯಣಸ್ವಾಮಿ ಹಾಗೂ ಇತರರ ಸತತ ನೆರವು ಮತ್ತು ಸಲಹೆಗಳೊಂದಿಗೆ ನೂತನ ಕಾರ್ಯಕಾರಿ ಸಮಿತಿಯು ಶ್ರೀ ಎಸ್. ಸೋಮಸುಂದರ ಅಧ್ಯಕ್ಷರಾಗಿ ಹಾಗೂ ಶ್ರೀ ವಿ.ಎಸ್. ಮಣಿ, ಕಾರ್ಯದರ್ಶಿ ಯಾಗಿ, ಶ್ರೀ ಎಸ್. ಸತ್ಯನಾರಾಯಣ, ಖಜಾಂಜಿಯಾಗಿ ಕಾರ್ಯರೂಪಕ್ಕೆ ಬಂದಿತು.

ಹೀಗೆ ನೂತನವಾಗಿ ಅಸ್ತಿತ್ವಕ್ಕೆ ಬಂದ ಸಂಘಕ್ಕೆ ಪ್ರಾರಂಭದಲ್ಲಿ ಅತ್ಯಂತ ಕ್ಲಿಷ್ಟಕರವಾದ ಪರಿಸ್ಥಿತಿಯನ್ನು ನಿಭಾಯಿಸುವುದು ಅಂದಿನ ಅಧ್ಯಕ್ಷರು, ಕಾರ್ಯದರ್ಶಿ, ಕಾರ್ಯಕಾರಿ ಸದಸ್ಯರು ಹಾಗೂ ನಮ್ಮ ಹೆಮ್ಮೆಯ ಸದಸ್ಯರುಗಳ ಉತ್ಸಾಹ, ಬೆಂಬಲಗಳಿಂದ ಸಾಧ್ಯವಾಯಿತು. ಹೊಸ ಸದಸ್ಯರ ನೋಂದಣಿ, ಕಿತ್ತಿಗಾನಹಳ್ಳಿಯಲ್ಲಿ ನಾಗರ ಕಟ್ಟೆಯ ಜೀರ್ಣೋದ್ಧಾರ, ವ್ಯವಸ್ಥಿತವಾದ ನಾಗಾರಾಧನೆ, ಶಂಕರ ಜಯಂತಿ ಕಾರ್ಯಕ್ರಮ, ಸಾಮೂಹಿಕ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ, ಹಿರಿಯ ಚೇತನರಿಗೆ ಗೌರವ, ಪ್ರತಿಭಾ ಪುರಸ್ಕಾರ, ಗುರುವಂದನ, ಸಾಮೂಹಿಕ ಸತ್ಯನಾರಾಯಣ ಪೂಜೆ, ಐವತ್ತು ವರ್ಷ ಪೂರೈಸಿದ ದಂಪತಿಗಳಿಗೆ ಗೌರವ, ಒಂದು ದಿನದ ಪ್ರವಾಸ, ಕ್ಯಾಲೆಂಡರ್ ಮುದ್ರಣ, ವಿತರಣೆ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಯೇ ಇದಕ್ಕೆ ಸಾಕ್ಷಿ. ಇದಲ್ಲದೆ ಮುಖ್ಯವಾಗಿ 'ಆರ್ಯಾವರ್ತ' ಸಂಘಕ್ಕೆ ಅತ್ಯಂತ ಅಲ್ಪ ಸಮಯದಲ್ಲಿ ವೈಕುಂಠ ವಾಹನ ಕೊಡುಗೆಯು ನಮ್ಮ ಸಂಘಕ್ಕೆ ಒಂದು ಶಿಖರಪ್ರಾಯವಾದ ಸಂಗತಿ. ಮತ್ತೊಂದು ಮಾಡಲೇ ಬೇಕಾದ ಕಾರ್ಯವನ್ನು ಕೈಗೊಂಡಿದ್ದೆಂದರೆ 'ವಿದ್ಯಾನಿಧಿ' ಮತ್ತು 'ಅನ್ನದಾನ ನಿಧಿ'ಯ ಸ್ಥಾಪನೆ. ಇದರ ವೈಶಿಷ್ಟ್ಯವೇ ನೆಂದರೆ ಈ ನಿಧಿಗೆ ನಮ್ಮ ಬೃಹಚ್ಚರಣದವರಲ್ಲದೇ ಅವರ ಸ್ನೇಹಿತರು, ಹಿತೈಷಿಗಳು ಕೂಡ ಉದಾರವಾಗಿ ದೇಣಿಗೆ ನೀಡಿರುತ್ತಾರೆ.

ಈ ಮೇಲಿನ ಕಾರ್ಯಕ್ರಮಗಳಲ್ಲದೇ ಸತತವಾಗಿ ಎಂಟು ವರ್ಷಗಳಿಂದ ಲೇಖನಗಳು ಮತ್ತು ಛಾಯಚಿತ್ರ ಗಳನ್ನು ಒಳಗೊಂಡ "ಬೃಹಚ್ಚರಣ" ತ್ರೈಮಾಸಿಕ ಪತ್ರಿಕೆ ಯನ್ನು ಹೊರತರುತ್ತಿರುವುದು ಹೆಮ್ಮೆಯ ವಿಷಯ.

ಇದೇ ರೀತಿ ನಮ್ಮ ಎಲ್ಲಾ ಸದಸ್ಯರ ಭೌತಿಕ ಮತ್ತು ಆರ್ಥಿಕ ಪ್ರೋತ್ಸಾಹ ಮುಂದುವರೆಯಲೆಂದು ಆಶಿಸುತ್ತೇವೆ.



◆ ಅರುಣ್ ವಿ.
ಸಹ ಕಾರ್ಯದರ್ಶಿ
99880166001



# ಕಲ್ಯಾಣೋತ್ಸವ
## ಭಾವಾರ್ಥ ಚಿಂತನೆ

**ಕ**ಲ್ಯಾಣ ಎಂದರೆ ಸರ್ವರಿಗೂ ಮಂಗಳವಾಗಲೆಂದು ಮಾಡುವ ಕಾರ್ಯ. ಉತ್ಸವ ಎಂದರೆ ಸಾಮೂಹಿಕವಾಗಿ ಕೈಗೊಳ್ಳುವ ಸಂತೋಷ ತರುವ ಕೂಟ ಎಂದು ಅರ್ಥೈಸಬಹುದು. ಕಲ್ಯಾಣೋತ್ಸವ ಎಂಬುದು ದೇವತೆಗಳ ಉಪಾಸನಾ ಕ್ರಮ. ಈ ಕಾರ್ಯದಲ್ಲಿ ಪದ್ಮಾವತಿ–ಶ್ರೀನಿವಾಸ ಕಲ್ಯಾಣ, ಲಕ್ಷ್ಮೀ–ವೆಂಕಟೇಶ್ವರ ಕಲ್ಯಾಣ, ಸೀತಾ–ರಾಮ ಕಲ್ಯಾಣ, ರುಕ್ಮಿಣಿ–ಕೃಷ್ಣ ಕಲ್ಯಾಣ, ಗಿರಿಜಾ–ಪರಮೇಶ್ವರ ಕಲ್ಯಾಣ, ವಳ್ಳಿ–ದೇವಯಾನಿ–ಸುಬ್ರಹ್ಮಣ್ಯ ಕಲ್ಯಾಣಗಳು ವಿಶೇಷವಾದವು.


ಮಂಗಳವಾದ್ಯಗಳೊಂದಿಗೆ ಪ್ರಾರಂಭವಾಗುವ ಕಲ್ಯಾಣೋತ್ಸವಗಳಲ್ಲಿ ಆಯಾ ದೇವತೆಗಳನ್ನು ವಧು–ವರರಾಗಿ ಅಲಂಕರಿಸಿರುತ್ತಾರೆ. ಪುರೋಹಿತರ ಮೂಲಕ ಗಣಪತಿ ಪೂಜೆಯೊಂದಿಗೆ ಪ್ರಾರಂಭಿಸಿ ಪುಣ್ಯಾಹ, ದೇವತಾ ನಾಂದಿ, ಕಾಶಿಯಾತ್ರೆ, ನಿರೀಕ್ಷಣಾ, ಯಜ್ಞೋಪವೀತಾ ಪೂಜಾ, ರಕ್ಷಾಬಂಧನ, ಮಾಂಗಲ್ಯ ಪೂಜಾ, ಮಾಂಗಲ್ಯ ಧಾರಣಾ, ಅಕ್ಷತಾರೋಹಣ, ಮಂತ್ರಪುಷ್ಪ, ಅಷ್ಠಾವಧಾನ ಸೇವೆ, ಮಹಾಮಂಗಳಾರತಿ ಮತ್ತು ಆಶೀರ್ವಾದ ನಡೆಯುತ್ತವೆ. ಸಾಂಕೇತಿಕವಾಗಿ ವಧು–ವರರ ಮಾತಾಪಿತೃಗಳಾಗಿ ದಂಪತಿಗಳನ್ನು ಕೂಡಿಸಿ ಅವರ ಮೂಲಕ ಈ ಎಲ್ಲಾ ಮೇಲಿನ ವಿಧಿ ವಿಧಾನಗಳನ್ನು ಮಾಡಿಸುತ್ತಾರೆ.

ಕಲ್ಯಾಣವು ನಿರ್ವಿಘ್ನವಾಗಿ ನೆರವೇರಲು ಅವಕಾಶ ಕೋರುವುದೇ ಗಣಪತಿ ಪೂಜೆ, ನಂತರ ಕಲ್ಯಾಣ ಮಂಟಪದ ಸ್ಥಳವನ್ನು ಶುದ್ಧೀಕರಿಸುವುದು ಪುಣ್ಯಾಹ, ದೇವತಾ ನಾಂದಿಯೆಂದರೆ ಸಾಕಾರ ದೇವತೆಗಳಿಗೂ ಕಾರಣನಾದ ನಿರಾಕಾರ ಪರಬ್ರಹ್ಮನನ್ನು ಸ್ಮರಿಸುವುದು. ಕಾಶಿ ಎಂದರೆ ವಿಷ್ಣು ಪಾದವನ್ನು ತೊಳೆದ ಪರಮ ಪವಿತ್ರ ಗಂಗೆ ಮತ್ತು ಮುಕ್ತಿ ಕ್ಷೇತ್ರ. ಇಂತಹ ಪುಣ್ಯಕ್ಷೇತ್ರ ದರ್ಶನದ ಪ್ರಾಮುಖ್ಯತೆಯನ್ನು ತಿಳಿಸುವುದಕ್ಕಾಗಿ ಕಾಶೀ ಯಾತ್ರೆಯನ್ನು ಮಾಡಲಾಗುತ್ತದೆ. ನಿರೀಕ್ಷಣಾ ಸಮಯದಲ್ಲಿ ವಧು–ವರರ, ಪ್ರವರ ವಾಚನ ನಡೆಯುತ್ತದೆ. ಪರಬ್ರಹ್ಮನಿಂದ ಹಿಡಿದು ಪ್ರಸ್ತುತ ಕಲ್ಯಾಣೋತ್ಸವ ದೇವತೆಗಳವರೆಗೂ ಅವ್ಯಕ್ತವು ವ್ಯಕ್ತರೂಪವಾಗಿ ವ್ಯಾಪಿಸಿಕೊಂಡಿರುವುದನ್ನು ತಿಳಿಸುವುದೇ ಈ ಕ್ರಿಯೆ. ಗೃಹಸ್ಥಾಶ್ರಮದ ಸಂಕೇತವಾಗಿ ಆರು ಎಳೆ ಜನಿವಾರ ಧಾರಣೆ ಮಾಡುವುದು ಯಜ್ಞೋಪವೀತ ಪೂಜಾ, ಧಾರಣೆ. ದೇವತೆಗಳು ಪುರುಷ ಮತ್ತು ಸ್ತ್ರೀ ರೂಪದಲ್ಲಿ ಜಗತ್ತಿಗೆ ಮಾದರಿ ದಂಪತಿಗಳಾಗಿ ವ್ಯಕ್ತವಾಗುವುದಕ್ಕಾಗಿ ಕಂಕಣ ಬದ್ಧರಾಗುತ್ತಾರೆ. ಇದೇ ರಕ್ಷಾಬಂಧನ. ಜಗದುಪಕಾರಕ್ಕಾಗಿ ಮಾಡುವ ಈ ಸಾಂಕೇತಿಕ ಮಾಂಗಲ್ಯಧಾರಣೆಯೊಡನೆ ವಧು ಪರಾಶಕ್ತಿ ಸ್ವರೂಪ ಮತ್ತು ವರನು ಚೈತನ್ಯ ಸ್ವರೂಪನಾದ ಪರಬ್ರಹ್ಮವೇ ಎನ್ನುವುದು. ಇಂತಹ ಕಲ್ಯಾಣವನ್ನು ನೋಡುವ ಭಾಗ್ಯ ನಮ್ಮದಾಯಿತೆಂದು 'ಧನ್ಯತಾ ಭಾವದಿಂದ' ದೇವರಿಗೆ ಅಕ್ಷತೆ ಅರ್ಪಿಸುವುದು 'ಅಕ್ಷತಾರೋಹಣ'. ಅಷ್ಠಾವದಾನ ಸೇವೆಯಲ್ಲಿ ದೇವತೆಗಳ ನಾಮಸ್ಮರಣೆಯೊಂದಿಗೆ, ಚತುರ್ವೇದ ಪಠಣ, ಪುರಾಣ ವಾಚನಾ, ಉಪನಿಷತ್ ವಾಚನಾ, ಗಾಯನ ಸೇವೆ ಮುಂತಾದವು ಇರುತ್ತವೆ. ಪರಬ್ರಹ್ಮನ ಸೃಷ್ಟಿಯಲ್ಲಿ ಸಕಲವೂ ಮಂಗಳವೇ ಎಂದು ಸಾರಲು ಕರ್ಪೂರದಿಂದ ಮಹಾ ಮಂಗಳಾರತಿ ಮಾಡುವುದು ಸಂಪೂರ್ಣ ಸಮರ್ಪಣೆಯ ಸಂಕೇತ. ಈ ಶುಭ ಸಂದರ್ಭದಲ್ಲಿ ಸಂತೋಷವಾಗಿ ಸಿಹಿ ಹಂಚಲಾಗುತ್ತದೆ. ಇದರೊಂದಿಗೆ ಕಲ್ಯಾಣೋತ್ಸವ ಮಂಗಳವಾಗುವುದು.

ಕಲ್ಯಾಣೋತ್ಸವಗಳಲ್ಲಿ ನಡೆಯುವ ಕಾರ್ಯಕ್ರಮಗಳನ್ನೇ ಮುಂದಿಟ್ಟುಕೊಂಡು ಭಾರತೀಯ ಸಂಸ್ಕೃತಿಯ ವಿವಾಹಗಳಲ್ಲೂ ಅದೇ ಪದ್ಧತಿಯನ್ನು ಅನುಸರಿಸುವ ರೂಢಿ ಇದೆ. ಪುರಾಣಗಳಲ್ಲಿ ಉಲ್ಲೇಖವಾಗಿರುವ ದೇವತಾ ಕಲ್ಯಾಣಗಳನ್ನೇ ಇಂದು ನಾವು ಅನುಸರಿಸುತ್ತಿರುವುದು. ಒಂದು ನಿಮಿತ್ತ ಜಗತ್ಕಲ್ಯಾಣಕ್ಕಾಗಿ ದೇವತಾ ಕಲ್ಯಾಣಗಳು ನಡೆದಿರುವುದು. ಅದೇ ಉದ್ದೇಶದಿಂದಲೇ ಮಾನವನು ಸಮಾಜದಲ್ಲಿ ಈ ಕಲ್ಯಾಣ ಎಂಬ ವಿವಾಹ ಚೌಕಟ್ಟು ಹಾಕಿಕೊಂಡಿರುವುದು. ಬರುಬರುತ್ತಾ ದೇಶ, ಕಾಲಕ್ಕೆ ತಕ್ಕಂತೆ ವಿವಾಹ ಸಂಪ್ರದಾಯಗಳು ಬದಲಾಗಿವೆ. ಮುಖ್ಯವಾದ ಉದ್ದೇಶವೇ ಮರೆತು ಆಡಂಬರ–ಭೋಗದಲ್ಲಿ ಸ್ಪರ್ಧೆಯ ಮನೋಭಾವ ಹೆಚ್ಚಾಗಿ ಶಾಸ್ತ್ರಗಳನ್ನು ತಿರುಚುವಂತಾಗಿದೆ.

**ವಿವಾಹದಲ್ಲಿ "ವಿ" ಎಂದರೆ ವಿಶೇಷವಾದ, "ವಾಹ" ಎಂದರೆ ಭಾರ ಹೊರುವುದು. ಹೆಚ್ಚಿನ ಜವಾಬ್ದಾರಿ ಹೊತ್ತು ದಂಪತಿಗಳು ಸಾಮಾಜಿಕ ಕಳಕಳಿಯಿಂದ ಧರ್ಮಯುತವಾಗಿ ಅರ್ಥಸಂಪಾದಿಸಿ ತಮ್ಮ ಕಾಮನೆಗಳನ್ನು ಪೂರೈಸಿಕೊಂಡು ಅಪವರ್ಗವಾದ ಮೋಕ್ಷವನ್ನು ಹೊಂದಲು ಒಟ್ಟಿಗೆ ಹೆಜ್ಜೆ ಇಡಬೇಕು.**

'ಕಲ್ಯಾಣ' ಎಂಬ ಪದಕ್ಕೆ 'ಲಗ್ನ' ಎಂಬುದು ಪರ್ಯಾಯ ಪದ. ಲಗ್ನ ಎಂದರೆ ಸೇರಿಕೊಳ್ಳುವುದು ಎಂದರ್ಥ. ಜೀವಾತ್ಮ ಮತ್ತು ಪರಮಾತ್ಮ ಒಂದೇ ಎಂದು ತಿಳಿಸುವ ಭಾವ ಮತ್ತು ಸತ್ಯೋತ್ಕರ್ಷ ಭಾವವಾದ ಬ್ರಹ್ಮಾತ್ಮೈಕ್ಯತೆಯನ್ನು ಗುರುತಿಸುವುದು ದೇವತಾ ಕಲ್ಯಾಣೋತ್ಸವಗಳ ಮುಖ್ಯ ಉದ್ದೇಶ.



◆ ಆರ್.ರಮೇಶ್
9886034048



# ಶ್ರೀ ಶ್ರೀನಿವಾಸನ ಕಲ್ಯಾಣೋತ್ಸವ

ದಿನಾಂಕ 29–12–2019 ಶ್ರೀ ನಾಗೇಶ್ವರ ಕ್ಷೇತ್ರದಲ್ಲಿ ಬೃಹಚ್ಚರಣರ ಬಂಧು ಭಗಿನಿಯರ ಸಮಾವೇಶದಲ್ಲಿ ವೇ॥ಬ್ರ॥ ನಾಗರಾಜ ದೀಕ್ಷಿತ್, ವೇ॥ಬ್ರ॥ ಸೂರ್ಯ ನಾರಾಯಣ ದೀಕ್ಷಿತ್ ಹಾಗೂ ಋತ್ವಿಕ ವೃಂದದಿಂದ ಶ್ರೀ ಶ್ರೀನಿವಾಸ ದೇವರ ಕಲ್ಯಾಣ ಮಹೋತ್ಸವ, ಶ್ರೀ ಲಕ್ಷ್ಮೀ ನಾರಾಯಣ ಸಮುದಾಯ ಭವನದಲ್ಲಿ 53 ಸೇವಾಕರ್ತರ ಬಂಧು, ನೇಹಿಗರ ನೇತೃತ್ವದಲ್ಲಿ ವೈಭವೋಪೇತವಾಗಿ ಜರುಗಿತ್ತು.

ಶ್ರೀ ಶ್ರೀನಿವಾಸ ದೇವರು ಪತ್ನಿ ಸಮೇತರಾಗಿ ಆನಂದ ಸ್ವರೂಪಿಯಾಗಿ, ಮಂಗಳವಾದ್ಯ, ವೇದ ಮಂತ್ರಗಳೊಂದಿಗೆ ಆಗಮಿಸಿದ್ದನ್ನು ನೋಡಿ, ನೆರೆದವರು ಧನ್ಯರಾದರು.

ಕಲ್ಯಾಣೋತ್ಸವ ದಶಕದ ಹಿಂದೆ ಒಮ್ಮೆ ಶ್ರೀ ಪಟ್ಟಾಭಿರಾಮಯ್ಯ ಮತ್ತು ಶ್ರೀ ಟಿ.ಎಸ್. ಕೃಷ್ಣನ್‌ರವರ ಪರಿಶ್ರಮದಲ್ಲಿ ಸುಮಾರು ಹನ್ನೆರಡು ಸೇವಾಕರ್ತರು ಸೇರಿದ್ದ ಕಾರ್ಯಕ್ರಮದಲ್ಲಿ ನಾನು ಸಹ ಭಾಗವಹಿಸಿದ್ದೆ. ತದ ನಂತರ ಸದರಿ ಕಲ್ಯಾಣೋತ್ಸವ ಸಾಮೂಹಿಕ ರೂಪ ತಳೆದು ಮಾರ್ಗಶಿರ ಚಳಿಗಾಲದಲ್ಲಿ ಮಂಜಪುತ್ತೂರು ಬೃಹಚ್ಚರಣ ಸಂಘದ ಆಡಳಿತದ ಒಂದು ಮೆಚ್ಚಿನ ಕಾರ್ಯಸೂಚಿಯಾಗಿ ನಡೆದು ಬಂದಿರುತ್ತಿರುವುದು ದೇವರ ಅನುಗ್ರಹ ಹಾಗೂ ನಮ್ಮ ಸುಕೃತ.

ದಿನಾಂಕ 29–12–19ರಂದು ನಡೆದ ಕಾರ್ಯಕ್ರಮ ಸರ್ವರಿಗೂ ಅಚ್ಚುಮೆಚ್ಚು. ದಿನೇ ದಿನೇ ಈ ಕಾರ್ಯಕ್ರಮ ಜನಾನುರಾಗಿಯಾಗಿರುವುದು ಇಂದು ನೆರೆದ ಜನರ ಅಮಿತೋತ್ಸಾಹ, ಸರ್ವರ ಮುಖದಲ್ಲಿ ಮೂಡಿದ ತೃಪ್ತಿಯ ಮಂದಹಾಸ, ಕಾರ್ಯಕರ್ತರುಗಳ ಉತ್ಸಾಹವನ್ನು ಹೆಚ್ಚಿಸುತ್ತಾ ಅವರು ಇನ್ನಷ್ಟು ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಲು ಉತ್ತೇಜನ ನೀಡಿರುವುದು ದಿಟ.

ನಾಗೇಶ್ವರ ಕ್ಷೇತ್ರದಲ್ಲಿ ಪ್ರಾತಃಕಾಲ ಎಂಟು ಗಂಟೆ ಯಿಂದಲೇ ಬಂಧುಗಳು ಆಗಮಿಸಿ. ದೇವರ ದರ್ಶನ ಮಾಡಿ ಮೂಲದೇವರ ಮಂಗಳಾರತಿಯ ನಂತರ ಕಲ್ಯಾಣಕ್ಕಾಗಿ ಉತ್ಸವ ಮೂರ್ತಿಗಳನ್ನು ಪೂರ್ಣಕುಂಭದೊಂದಿಗೆ ಸುಮಂಗಲಿಯರು ಪೂಜಾಸಾಮಗ್ರಿಗಳೊಂದಿಗೆ, ನಾಗಸ್ವರದ ಜೊತೆಗೆ ಸಂಗೀತ, ದೇವರ ನಾಮಗಳ ಪಠಣದೊಂದಿಗೆ ಶೋಭಯಾತ್ರೆಯಲ್ಲಿ ದೇವರುಗಳನ್ನು ಕಲ್ಯಾಣಮಂಟಪಕ್ಕೆ ಕರೆತಂದು ಪ್ರತಿಷ್ಠಾಪಿಸಲಾಯಿತು. ನಂತರ ನಿಯಮಿತವಾಗಿ ಮಂತ್ರ ಪಠಣದ ವೇಳೆಯಲ್ಲಿ 53 ಸೇವಾಕರ್ತರುಗಳಿಗೆ ಅಗತ್ಯ ಪೂಜಾ ವಸ್ತುಗಳನ್ನು ನೀಡಿದರು. ಸ್ತುತಿ, ಗಾಯತ್ರಿ ಮಂತ್ರಪಠಣ, ಸಂಕಲ್ಪ, ಗಣಪತಿ ಮತ್ತು ನವಗ್ರಹ ಪೂಜೆಯ ನಂತರ ಕಲ್ಯಾಣ ಕಾರ್ಯಕ್ರಮದಿಂದ ಎಲ್ಲರೂ ತೃಪ್ತರಾದರು. ಮಂತ್ರ, ಪ್ರವಚನ, ಮಧ್ಯೆ ಮಧ್ಯೆ ನೀಡಿದ ವಿವರಣೆಗಳು, ಜೀರಿಗೆ, ಬೆಲ್ಲ, ಕನ್ಯಾದಾನ ಸಮಯದಲ್ಲಿ ಬಂದವರೆಲ್ಲರೂ, ದೇವರಿಗೆ ಧಾರೆಯೆರೆದರು. ಸೇವಾಕರ್ತೃರು, ಕೈಂಕರ್ಯದಲ್ಲಿ ಶ್ರೀ ಶ್ರೀನಿವಾಸ ದೇವರ ಆಶೀರ್ವಾದ ಪಡೆದು ಧನ್ಯರಾದರು.


ಮಾಂಗಲ್ಯಧಾರಣೆ ಮುಂಚೆ, ಸಂಬಂಧ ಮಾಲೆ, ಅಕ್ಷತಾರೋಹ ಮುಂತಾದ ಮದುವೆಯ ವಿಧಿವಿಧಾನಗಳು ನಡೆದಾಗ, ಎಲ್ಲೆಲ್ಲೂ ಆನಂದವೇ ಆನಂದ. ಸುಮಾರು ಮೂರು ತಾಸಿನ ಅವಧಿಯಲ್ಲಿ ಸ್ವಲ್ಪವೂ ಬೇಸರಿಸದೆ ಜನ ತದೇಕಚಿತ್ತದಲ್ಲಿ, ಭಕ್ತಿ ಪರವಶರಾಗಿದ್ದರು.

ಇನ್ನು ಕಲ್ಯಾಣದ ಭೋಜನ, ಫಲಹಾರದ ಬಗೆಗೆ ಹೇಳಲು ಒಂದು ಗಾದೆ ನೆನಪಿಗೆ ಬರುತ್ತದೆ. "ಗಂಡಿಗೆ ಹೆಣ್ಣು ಚಂದ, ಹೆಣ್ಣಿಗೆ ಗಂಡು ಚಂದ, ಬಂದವರಿಗೆ ಊಟ ಚೆಂದ" ಹಾಗೆಯೆ ಬೆಳಗ್ಗೆ ಛಳಿಯಲ್ಲಿ ಕೇಸರಿಬಾತು, ಉಪ್ಪಿಟ್ಟು ತಿಂದರೂ ಮದುವೆಯ ಊಟ ರುಚಿ ನೋಡಲೇಬೇಕು. ಅವರೆಕಾಳಿನ ಹುಳಿ, ಸಾರು, ಪಲ್ಯಗಳು ಹೋಳಿಗೆ, ವಡೆಗಳ ಜೊತೆಗೆ ಲಾಡುವಿನ ಸಂಚಿ. ಇನ್ನೇನು ಬೇಕು? ಮಾಯ ಬಜಾರಿನ "ವಿವಾಹ ಭೋಜನವಿದು" ಹಾಡು ನೆನಪಿಗೆ ಬಾರದೆ ಇರದು.

ಈ ಕಾರ್ಯಕ್ರಮದ ನಂತರ ನಮ್ಮ ದೈನಂದಿನ ಜೀವನಕ್ಕೆ ತೆರಳುವುದಕ್ಕೆ ಮುನ್ನ ಇಂತಹ ಸುಂದರ ವೈಭವಯುತ ಕಾರ್ಯಕ್ರಮ ರೂಪಿಸಿದ ಬೃಹಚ್ಚರಣ ಸಂಘದ ಸರ್ವ ಕಾರ್ಯಕರ್ತರು ಅಭಿನಂದನೀಯರು.



◆ **ಜಿ.ಎಸ್. ಸತ್ಯಮೂರ್ತಿ**
**9844469581**



# ಶ್ರೀ ಶ್ರೀನಿವಾಸ ದೇವರ ಕಲ್ಯಾಣೋತ್ಸವದ ಛಾಯಾಚಿತ್ರಗಳು










# ಶ್ರೀ ಶ್ರೀನಿವಾಸ ದೇವರ ಕಲ್ಯಾಣೋತ್ಸವದ ಸೇವಾಕರ್ತರು

















# ಶ್ರೀ ಶ್ರೀನಿವಾಸ ದೇವರ ಕಲ್ಯಾಣೋತ್ಸವದ ಸೇವಾಕರ್ತರು

















# ಶ್ರೀ ಶ್ರೀನಿವಾಸ ದೇವರ ಕಲ್ಯಾಣೋತ್ಸವದ ಸೇವಾಕರ್ತರು















# ನಮ್ಮವರ ಮನೆಗಳಲ್ಲಿ ಬೊಂಬೆ ಉತ್ಸವ......
















ನವರಾತ್ರಿ

# ನಮ್ಮವರ ಮನೆಗಳಲ್ಲಿ ಬೊಂಬೆ ಉತ್ಸವ......























# ಪ್ರವಾಸದ ಛಾಯಾಚಿತ್ರಗಳು






















# ಪ್ರವಾಸದ ಛಾಯಾಚಿತ್ರಗಳು












# ಸ್ಮರಣೀಯ ಪ್ರವಾಸ, 2019

**ಬೃ**ಹಚ್ಚರಣ ಸಂಘವು ಎಂದಿನಂತೆ ಈ ವರ್ಷವೂ ಸತತ ಏಳನೇ ಬಾರಿಗೆ ಒಂದು ದಿನದ ಪ್ರವಾಸವನ್ನು ದಿನಾಂಕ 10.11.2019ರಂದು ಏರ್ಪಡಿಸಿತ್ತು. ಈ ವರ್ಷದ ಪ್ರವಾಸ ವನ್ನು ಕಲ್ಲೂರು ಶ್ರೀ ರಾಮ ದೇವಸ್ಥಾನ, ಸಂಪಿಗೆ ಶ್ರೀನಿವಾಸ ದೇವಸ್ಥಾನ, ಹೆಬ್ಬೂರು ಸಂಸ್ಥಾನ, ಕೈದಾಳ ಚೆನ್ನಕೇಶವ ದೇವಸ್ಥಾನ, ಗೂಳೂರು ಗಣಪತಿ ದೇವಸ್ಥಾನಕ್ಕೆ ಏರ್ಪಡಿಸ ಲಾಗಿತ್ತು. ಈ ಸ್ಥಳಗಳು ತುಮಕೂರು ಜಿಲ್ಲೆಯಲ್ಲಿದೆ. ಸಂಘದ ಕಾರ್ಯಕಾರಿ ಸದಸ್ಯರು ಅಚ್ಚುಕಟ್ಟಾಗಿ ಪ್ರವಾಸವನ್ನು ಏರ್ಪಡಿಸಿದ್ದರು.

ಈ ಸಲ ಹೊಸ ಮುಖದ ಸದಸ್ಯರು ಪ್ರವಾಸಕ್ಕೆ ಬಂದಿದ್ದರು. ಮೂರು ಬಸ್ಸುಗಳಲ್ಲಿ ಸುಮಾರು 125 ಸದಸ್ಯರು ಪಾಲ್ಗೊಂಡಿದ್ದರು. ಬಸವನಗುಡಿಯ ಕೃಷ್ಣರಾವ್ ಪಾರ್ಕಿನ ಬಳಿಯಿರುವ ದ್ವಾರಕಾ ಭವನದಿಂದ ಬೆಳಗಿನ 7.00 ಗಂಟೆಗೆ ನಮ್ಮ ಪ್ರಯಾಣ ಶುರುವಾಯಿತು. ನಾನು ಮತ್ತು ನನ್ನ ಕುಟುಂಬ 'ಎ' ಬಸ್ಸಿನಲ್ಲಿ ಶ್ರೀಯುತ ಸೋಮ ಸುಂದರಂ ಮತ್ತು ಸಂಗಡಿಗರ ನೇತೃತ್ವದಲ್ಲಿ ಹೊರಟೆವು. ನೈಸ್ ರಸ್ತೆಯಲ್ಲಿ ಪ್ರಯಾಣಿಸುವಾಗ ಪ್ರತಿಯೊಬ್ಬರಿಗೂ ಕಿತ್ತಳೆ ಹಣ್ಣು, ನೀರಿನ ಬಾಟಲುಗಳು, 1 ಚೀಲ, 1 ಟವಲ್, ಕುರುಕು ತಿಂಡಿಗಳು ತರಹ ತರಹವಾದ ಬಿಸ್ಕತ್‌ಗಳನ್ನೂ ಹಂಚಿದರು.

ಮೊದಲನೆಯ ತಂಗು ನಿಲ್ದಾಣ **ಸ್ವಾತಿ ಡೆಲಿಕೇಸಿ** ಎಂಬ ಹೊಟೇಲಿನಲ್ಲಿ ಬೆಳಗಿನ ಉಪಹಾರವಾಗಿ ರುಚಿಕರವಾದ ಇಡ್ಲಿ, ವಡೆ, ಸಾಂಬಾರ್, ಕೇಸರಿಬಾತ್ ಮತ್ತು ಪೊಂಗಲ್ ಜೊತೆಗೆ ಕಾಫಿ. ಅಲ್ಲಿನ ವ್ಯವಸ್ಥಾಪಕ ಶ್ರೀ ಅಶೋಕರವರ ಪೂರ್ಣ ಸಹಕಾರ ನೀಡಿದರು.

**ಕಲ್ಲೂರು ಶ್ರೀ ರಾಮದೇವರ ದೇವಸ್ಥಾನಕ್ಕೆ** ಭೇಟಿ. ಈ ದೇವಸ್ಥಾನ ಗುಬ್ಬಿಯಲ್ಲಿದೆ. ಶ್ರೀರಾಮ, ಸೀತೆ, ಲಕ್ಷ್ಮಣ ಮತ್ತು ಆಂಜನೇಯನ ವಿಗ್ರಹಗಳನ್ನು ಅಮೃತಶಿಲೆಯಲ್ಲಿ ಕೆತ್ತಲಾಗಿದೆ. 1935ರಲ್ಲಿ ಇಲ್ಲಿನ ಜನರು ಪ್ರತಿ ವರ್ಷ ಸೇರಿ ಶ್ರೀ ಲಕ್ಷ್ಮೀನಾರಾಯಣ ಮತ್ತು ಶ್ರೀ ಸತ್ಯನಾರಾಯಣ ಜೋಯಿಸ್ ಅವರ ಸಮ್ಮುಖದಲ್ಲಿ ರಾಮೋತ್ಸವವನ್ನು ಆಚರಿಸಲು ಶುರು ಮಾಡಿದರು. ನಂತರ ದೇವಸ್ಥಾನದ ಗರ್ಭಗುಡಿಯನ್ನು ಕಟ್ಟಲು ತೀರ್ಮಾನಿಸಿ ಮಣ್ಣನ್ನು ಅಗೆದಾಗ 14 ಸಾಲಿಗ್ರಾಮಗಳು, ಶ್ರೀ ವೆಂಕಟೇಶ್ವರ, ಮಾರುತಿ, ಅನ್ನಪೂರ್ಣೇಶ್ವರಿ ಮತ್ತು ನಕ್ಷತ್ರ ಮಾಲೆ ಕಾಣಿಸಿಕೊಂಡಿತು. ಹೆಬ್ಬೂರಿನ ಶ್ರೀ ಶ್ರೀ ಶ್ರೀಧರಾನಂದ ಸ್ವಾಮೀಜಿಯವರ ಸಮ್ಮುಖದಲ್ಲಿ ದೇವಸ್ಥಾನವನ್ನು ನಿರ್ಮಿಸಲಾಯಿತು. ಕುಂಭಾಭಿಷೇಕವನ್ನು ಮೈಸೂರಿನ ಹಿಂದಿನ ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ರವರ ನೇತೃತ್ವದಲ್ಲಿ ನೆರವೇರಿಸಲಾಯಿತು. ಇತ್ತೀಚೆಗೆ ಇಲ್ಲಿಗೆ ಮೈಸೂರು ಅರಸ ಶ್ರೀ ಯದುವೀರರು ಆಗಮಿಸಿದ್ದರು. ನಮ್ಮ ಸದಸ್ಯರು ಈ ಭಜನಾ ಮಂದಿರದಲ್ಲಿ ಭಜನೆ ಮತ್ತು ಸಂಗೀತಗಳನ್ನು ಪರಮಾತ್ಮನಿಗೆ ಅರ್ಪಿಸಿದರು. ಮಹಾಮಂಗಳಾರತಿಯಾದ ಮೇಲೆ ಎಲ್ಲರಿಗೂ ಬಾದಾಮಿ ಹಾಲನ್ನು ವಿತರಿಸಲಾಯಿತು.

ನಂತರ ನಮ್ಮ ಭೇಟಿ ತುರುವೇಕೆರೆಯಲ್ಲಿರುವ **ಸಂಪಿಗೆ (ಚಂಪಕ) ಶ್ರೀನಿವಾಸರ ದೇವಸ್ಥಾನಕ್ಕೆ** ಹಿಂದಿನ ಕಾಲದಲ್ಲಿ ತುಂಬಾ ಸಂಪಿಗೆ ಮರಗಳು ಇದ್ದಿದ್ದರಿಂದ ಈ ಜಾಗಕ್ಕೆ ಸಂಪಿಗೆ ಎಂದು ಹೆಸರು ಬಂದಿತು. ಈ ಜಾಗವು ದ್ವಾಪರ ಯುಗಕ್ಕೆ ಸೇರಿದ ಸುಧಾಮನ ಜಾಗವೆಂದು ಪ್ರಸಿದ್ಧಿಯಾಗಿದೆ. ಶ್ರೀ ಶ್ರೀನಿವಾಸ ದೇವರು ಶಂಖ, ಚಕ್ರ, ಗಧಾಧಾರಿಯಾಗಿ ಶರಣಾಗತಿ ಹಸ್ತವನ್ನು ತೋರಿದ್ದಾರೆ. ಮೇ ಮಾಸದಲ್ಲಿ ಬ್ರಹ್ಮೋತ್ಸವ ನಡೆಯುತ್ತದೆ. ಸಂಘದ ವತಿಯಿಂದ ದೇವರಿಗೆ ಅರ್ಚನೆ ಮತ್ತು ಪ್ರಾಕಾರೋತ್ಸವ ನೆರವೇರಿಸಲಾಗುತ್ತದೆ.



ಇಲ್ಲಿ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಗಿತ್ತು. ಮೃಷ್ಟಾನ್ನ ಭೋಜನ. ಊಟವಾದ ಮೇಲೆ ವಿರಾಮ. ನಂತರ ಹೆಬ್ಬೂರು ಸಂಸ್ಥಾನಕ್ಕೆ ಭೇಟಿ. ಹೆಬ್ಬೂರು, ಕುಣಿಗಲ್ ತುಮಕೂರು ರಸ್ತೆಯಲ್ಲಿರುವ **ಹೆಬ್ಬೂರು ಕಾಮಾಕ್ಷಿ ಶಾರದಾ ದೇವಸ್ಥಾನಕ್ಕೆ** ಸೇರಿದೆವು. ಮಾತೆ ಶ್ರೀ ಶಾರದೆ ಪಂಚಲೋಹದ ಶ್ರೀ ಚಕ್ರದಲ್ಲಿ ಪ್ರತಿಷ್ಠಾಪನೆಯಾಗಿದೆ. ಈ ದೇವಸ್ಥಾನವು ಹಳೆಯ ಕೋದಂಡಾಶ್ರಮ ಮಠದಲ್ಲಿ ಪ್ರತಿಷ್ಠಾಪನೆಯಾಗಿದೆ. 1994ರಲ್ಲಿ ಶೃಂಗೇರಿ ಜಗದ್ಗುರು ಶ್ರೀ ಭಾರತೀತೀರ್ಥರು ಕುಂಭಾಭಿಷೇಕವನ್ನು ಮಾಡಿ ದೇವರನ್ನು ಪ್ರತಿಷ್ಠಾಪನೆ ಮಾಡಿದ್ದಾರೆ. ದೇವರಿಗೆ ಕೈಯಲ್ಲಿ, ಆಗಮದ ಪ್ರಕಾರ **ಪಾಶ, ಅಂಕುಶ, ಪುಸ್ತಕ ಮತ್ತು ಅಕ್ಷಮಾಲಗಳು** ಇವೆ. ಶ್ರೀ ಚಕ್ರದ


...ಮುಂದುವರೆದಿದೆ

ಪೀಠದ ಮೇಲೆ ಚಕ್ರದ ಆಕಾರದಲ್ಲಿ ಪಂಚ ಪ್ರೇತಾಸನ ಅಥವಾ ಪಂಚ ಬ್ರಹ್ಮ ಮಂಚಾಸನ (ಬ್ರಹ್ಮ, ವಿಷ್ಣು, ರುದ್ರ, ಈಶ್ವರ ಮತ್ತು ಸದಾಶಿವ) ಲಲಿತಾ ಸಹಸ್ರನಾಮ ಸ್ತೋತ್ರದ ಆಧಾರದ ಮೇಲೆ ದೇವಿಯನ್ನು ಪ್ರತಿಷ್ಠಾಪಿಸಲಾಗಿದೆ.

ಮೂಲವಿಗ್ರಹದ ಗರ್ಭಗುಡಿಯ ಮುಂಭಾಗದಲ್ಲಿ ವಿಶಾಲವಾದ ಪ್ರಾರ್ಥನಾ ಸಭಾಂಗಣವಿದೆ. ಇದು ದೇವಿ ಸ್ತುತಿ ಷೋಡಶಾಕ್ಷರೀ ಮಂತ್ರದ ಆಧಾರದಂತೆ 16 ಕಂಬಗಳ ಮೇಲೆ ನಿರ್ಮಿಸಲ್ಪಟ್ಟಿದೆ. ಈ ಕಂಬಗಳ ಸುತ್ತಲೂ ನಿರ್ಮಿಸಲ್ಪಟ್ಟಿರುವ ನವವಾರಣ ದೇವತೆಗಳಿದ್ದಾರೆ. ಸ್ವಾಮಿಗಳ ಉಪನ್ಯಾಸಕ್ಕೂ ಶುಕ್ರವಾರ, ಭಾನುವಾರ ಹಾಗೂ ಮುಖ್ಯ ದಿನಗಳಂದು, ಈ ಮಂಟಪವು ಬಳಸಲ್ಪಡುತ್ತದೆ. ಮಠದಲ್ಲಿ ನಮಗೆ ಕಾಫಿಯ ಆತಿಥ್ಯ ಬಹಳ ಚೆನ್ನಾಗಿತ್ತು.

ನಮ್ಮ ಮುಂದಿನ ಪಯಣ ತುಮಕೂರು ಜಿಲ್ಲೆಯ ಚೆನ್ನಕೇಶವ ಹಾಗೂ ಗಂಗಾಧರೇಶ್ವರ ಗುಡಿ ಇರುವ ಕೈದಾಳದ ಕಡೆಗೆ. ಗಂಗಾಧರೇಶ್ವರ ಗುಡಿಯನ್ನು ಹಳೆಗನ್ನಡ ಲಿಪಿಯ ಶಿಲಾಶಾಸನದ ಆಧಾರದಂತೆ ಕ್ರಿ.ಶ. 1150ರಲ್ಲಿ ಹೊಯ್ಸಳ ರಾಜ ನರಸಿಂಹನ ಕಾಲದಲ್ಲಿ ಪುರಾಧ್ಯಕ್ಷ ಗುಲೇಬಚಿ ಎಂಬುವವನು ನಿರ್ಮಿಸಿದ. ಇದರ ಮಹಾಶಿಲ್ಪಿ ಬೇಲೂರು ಹಳೇಬಿಡು ಗುಡಿಗಳ ಶಿಲ್ಪಿ ಜಕ್ಕಣಾಚಾರಿ. ಚೆನ್ನಕೇಶವನ ಶಿಲ್ಪವು ಹೊಯ್ಸಳ, ದ್ರಾವಿಡ ಹಾಗೂ ವಿಜಯನಗರ ಶಿಲ್ಪಗಳ ಮಿಶ್ರಣದಂತೆ ಇದೆ. ಚೆನ್ನಕೇಶವನ ಎರಡು ಪಕ್ಕಗಳಲ್ಲಿ ಶ್ರೀದೇವಿ, ಭೂದೇವಿ ಪತ್ನಿಯರಿದ್ದಾರೆ. ಕಪ್ಪು ಶಿಲೆಯ ಚೆನ್ನಕೇಶವನ ವಿಗ್ರಹ ಮನಮೋಹಕವಾಗಿದೆ. ಪಶ್ಚಿಮ ದಿಕ್ಕಿನೆಡೆಗೆ ಮುಖವಿರುವ ಈ ವಿಗ್ರಹವನ್ನು ಮುಸಲ್ಮಾನ ದಾಳಿಕೋರರು ಆಕ್ರಮಣ ಮಾಡಲು ಸಾಧ್ಯವಾಗಲಿಲ್ಲ ವೆಂದು ಅರ್ಚಕರು ತಿಳಿಸಿದರು. ಪೀಠದ ಸುತ್ತಲೂ ತ್ರಿಮೂರ್ತಿಗಳ ವಿಗ್ರಹ ಕೆತ್ತನೆಯೂ ಇದೆ. ಅತಿ ಸೂಕ್ಷ್ಮವಾದ ಕೆತ್ತನೆಗಳು ನೋಡುಗರ ಮನಸೆಳೆಯುತ್ತವೆ. ದಶಾವತಾರದ ಕೆತ್ತನೆಯ ಮಂಟಪದ ವಿಶೇಷವೆಂದರೆ ಮಕರ ಸಂಕ್ರಾಂತಿಯ ಸೂರ್ಯ ಕಿರಣಗಳು ಮೂಲ ವಿಗ್ರಹದ ಪಾದ ಸ್ಪರ್ಶವನ್ನು ಮಾಡುತ್ತವೆ. ಈ ದೇವಸ್ಥಾನದ ಶಿಲ್ಪಕಲೆಯು ಸೊಬಗಿನ ಬೀಡು.

ನಮ್ಮ ಅಂದಿನ ಕೊನೆಯ ಪ್ರೇಕ್ಷಣೀಯ ಸ್ಥಳ ತುಮಕೂರು ಜಿಲ್ಲೆಯ ಗೂಳೂರು ಗಣಪತಿ. ಇಲ್ಲಿಯ ಒಂದು ವಿಶಿಷ್ಟ ಸಂಪ್ರದಾಯ ಸೋಜಿಗವನ್ನುಂಟು ಮಾಡುತ್ತದೆ. ಬಲಿಪಾಡ್ಯಮಿಯ ದಿನ ಪ್ರಾರಂಭವಾಗುವ ಗಣೇಶನ ಪೂಜೆ ಒಂದು ತಿಂಗಳು ಜಾತ್ರೆಯೊಡನೆ ನಡೆಯುತ್ತದೆ. ಗೂಳೂರು ಕೆರೆಯಿಂದ ತರಲಾದ ಮಣ್ಣಿನಿಂದ 8–9 ಅಡಿಯ ವಿಗ್ರಹವನ್ನು ನಿರ್ಮಿಸಲಾಗುತ್ತದೆ. ಒಂದು ತಿಂಗಳ ಬಳಿಕ ವಿಗ್ರಹವನ್ನು ಗೂಳೂರು ಕೆರೆಯಲ್ಲೇ ವಿಸರ್ಜಿಸಲಾಗುತ್ತದೆ. ಋಷಿ ಅಗಸ್ತ್ಯರ ಆದೇಶದಂತೆ ಒಬ್ಬ ಬ್ರಾಹ್ಮಣ ಈ ಗೂಳೂರು ಗಣೇಶನ ವಿಗ್ರಹ ಪೂಜೆಯನ್ನು ಆರಂಭಿಸಿದನಂತೆ. ಇದು ಆ ಪ್ರದೇಶದ ಜನರು ಶತಮಾನಗಳಿಂದ ಆಚರಿಸಿಕೊಂಡು ಬಂದಿರುವ ವಿಶೇಷ ಪದ್ಧತಿ. ಅಗಸ್ತ್ಯರ ವಿಗ್ರಹವಿರುವ ಈ ಗುಡಿಯ ಮುಂದೆ ಎತ್ತರದ ಗರುಡಗಂಬವಿದೆ. ಈ ವಿಶೇಷ ಸ್ಥಳದ ನಂತರ ನಮ್ಮ ಪ್ರಯಾಣ ಬೆಂಗಳೂರಿನ ಕಡೆಗೆ. ಉಪ್ಪಿಟ್ಟು, ಮೊಸರನ್ನಗಳ ಬುತ್ತಿಗಳೊಡನೆ ಸುಖ ಪ್ರಯಾಣ ಮಾಡಿ 10 ಘಂಟೆಯ ವೇಳೆಗೆ ಸ್ವಸ್ಥಾನವನ್ನು ತಲುಪಿದೆವು. ತಿಂಗಳು ಕಳೆದರೂ ನೆನಪಿನಿಂದ ಮಾಸಿಹೋಗದ ಈ ಸುಖ ಪ್ರಯಾಣವನ್ನು ಏರ್ಪಾಡು ಮಾಡಿ ಪ್ರವಾಸದಲ್ಲಿ ಸಹಕರಿಸಿದ ಸಂಪಿಗೆ ದೇವಸ್ಥಾನದ ಮುಖ್ಯಸ್ಥರಾದ ಶ್ರೀಯುತ ಶ್ರೀಧರ ಮತ್ತು ಶ್ರೀನಿವಾಸರವರಿಗೂ ಧನ್ಯವಾದಗಳು.






◆ ಸಿ.ಎಸ್. ಶ್ರೀನಿವಾಸಮೂರ್ತಿ
9449445311

**ರೇಖಾ ಚಿತ್ರ**

◆ **ಸೋನಿಯಾ ಶಿವರಾಂ**
**9845024620**



# ದಾಸಯ್ಯ

ದಾಸಯ್ಯ ಅಂದರೆ ತಾತ್ಸಾರಾ ನಾ! ಔದಾಸೀನ್ಯ ನಾ! ಅವಗಣನೆ ನಾ! ಅಲಕ್ಷ್ಯ ನಾ! ಗೊತ್ತಿಲ್ಲ. ಕೆಲವು ಸಂದರ್ಭ ಗಳಲ್ಲಿ ದಾಸಯ್ಯ ಕೆಲಸಕ್ಕೆ ಬಾರದವನು ಅನ್ನುವ ರೀತಿಯಲ್ಲಿ ದಾಸಯ್ಯನನ್ನು ಬಿಂಬಿಸುತ್ತೇವೆ.

ಅವನ್ಯಾರೋ ಬೀದೀಲಿ ಹೋಗೋ ಯಃಕಶ್ಚಿತ್ ದಾಸಯ್ಯ ಹೇಳ್ದಾ ಅಂತ, ಅವನ ಮಾತು ಕಟ್ಕೊಂಡು ಹೀಗೆ ಮಾಡ್ತೀಯಲ್ಲಾ, ಬುದ್ದಿ ಇದೆಯಾ ನಿಂಗೇ... ಅನ್ನುವ ರೀತಿಯಲ್ಲಿ ಪ್ರಶ್ನೆ ಮಾಡಿ, ತನ್ನ ಪಾಡಿಗೆ ಶ್ರೀರಾಮನ ಭಜನೆಯನ್ನೋ, ಗೋವಿಂದನ ಸಂಕೀರ್ತನೆಯನ್ನೋ ಹೇಳಿಕೊಂಡು ಜಾಗಟೆ ಬಾರಿಸಿ, ಶಂಖ ಊದುವ ದಾಸಯ್ಯನನ್ನು ಅನವಶ್ಯಕವಾಗಿ ಮಧ್ಯದಲ್ಲಿ ಎಳೆದು ತಂದು, ತಾತ್ಸಾರದ ಮಾತನಾಡೋದು ಎಷ್ಟರಮಟ್ಟಿಗೆ ಸರಿ?

'ದಾಸ' ಸಾಹಿತ್ಯದ ಕೀರ್ತನೆಗಳನ್ನು ನೀಡಿದ ಮಹಾನುಭಾವರಾದ ಪುರಂದರದಾಸರು, ಕನಕದಾಸರ ಕೀರ್ತನೆಗಳನ್ನು ಭಕ್ತಿಯಿಂದ ಭಜಿಸಿ ಹಾಡಿ ಆನಂದಿಸುವ ನಾವು 'ದಾಸಯ್ಯನ' ಬಗ್ಗೆ ಆಡುವ ಅಪಹಾಸ್ಯದ ಮಾತುಗಳೇಕೆ?

ಕನಕದಾಸರು ತಮ್ಮನ್ನು .....

**ದಾಸದಾಸರ ಮನೆಯ ದಾಸಾನುದಾಸ ನಾನು**
**ಶ್ರೀಶ ಶ್ರೀರಂಗ ನಿಮ್ಮ ಮನೆಯ ದಾಸ।**
**ಕಾಳುದಾಸರ ಮನೆಯ ಆಳು ದಾಸ ನಾನಯ್ಯ।**
**ಕೀಳುದಾಸನು ನಾನು ಕಿರಿಯ ದಾಸ॥**

ಹೀಗೆ, ಆಳು, ದಾಸ, ಕೀಳು ದಾಸ, ಎಂದು ತಮ್ಮನ್ನು ಬಿಂಬಿಸಿಕೊಂಡವರು. ಆದರೆ, ಈ ಪುರಂದರದಾಸರು ಒಂದು ಕೀರ್ತನೆಯಲ್ಲಿ ಸ್ವಲ್ಪ ಬೇರೆಯದೇ ರೀತಿಯಲ್ಲಿ "ಟೈಂ ಇಲ್ಲದ ಗೃಹಿಣಿ" ದಾಸಯ್ಯನಿಗೆ ಹೇಳಿದ್ದು ಬೇರೆ ರೀತಿಯಲ್ಲಿ,

**ಇಕ್ಕಲಾರೆ ಕೈ ಎಂಜಲು, ಚಿಕ್ಕ ಮಕ್ಕಳು ಅಳುತಾರೆ ಹೋಗೋ ದಾಸಯ್ಯ॥**

**ಮನೆಯ ಸಾರಿಸುತೇನೆ ಮಡಕೆ ತೊಳೆಯುತೇನೆ**
**ಮನೆಯತೊಳೆಯೊಳಗಾರಿಲ್ಲ, ಹೋಗೋ ದಾಸಯ್ಯ**
**ತನಯರು ಅಳುತಾರೆ, ನಿನದೇನು ಕಾಟವು**
**ಕ್ಷಣ ಹೊತ್ತು ನಿಲ್ಲದೆ, ಹೋಗೋ ದಾಸಯ್ಯ॥**
**ಅಟ್ಟದ ಮೇಲಣ ಅಕ್ಕಿ ತೆಗೆಯಬೇಕು**
**ಹೊಟ್ಟೆ ನೋಯುತಲಿದೆ, ಹೋಗೋ ದಾಸಯ್ಯ**
**ಮುಟ್ಟಾಗಿ ಇದ್ದೇನೆ , ಮನೆಯೊಳಗಾರಿಲ್ಲ**
**ನಿಷ್ಠುರ ಮಾಡದೆ ಹೋಗೋ ದಾಸಯ್ಯ॥**

ಪಾಪ...! ಅವಳಿಗೆ ಟೈಂ ಇಲ್ಲವಂತೆ, ಮನೆ ಕೆಲಸ, ಮಕ್ಕಳು ಅಳುತಾವಂತೆ, ಅಕ್ಕಿ ಅಟ್ಟದ ಮೇಲೆ ಇದೆಯಂತೆ, ತೆಗೆಯೋಕೆ ಆಗೊಲ್ವಂತೆ, ಒಂದು ಕ್ಷಣನೂ ಇರಬೇಡ, ಹೋಗಯ್ಯ, ಅಂತ ಏನೇನೋ ಸಬೂಬು ಹೇಳಿ ಹೊರಗಟ್ಟಿದ್ದು ಸರಿ ಇಲ್ಲ ಅನ್ನಿಸುತ್ತೆ.



ಇಲ್ಲಿ, ತಕ್ಷಣ ನಮ್ಮ ಅಜ್ಜಿಯ ನೆನಪಾಯಿತು. ಮನೆಯಲ್ಲಿ ಸೂತಕ, ಪುರುಡು ಇದ್ದಾಗ ಸಾಮಾನ್ಯವಾಗಿ ಭಿಕ್ಷೆ ನೀಡುವುದಿಲ್ಲವಂತೆ. ಹಾಗಾಗಿ ಒಂದೊಂದು ಸಲ ನಮ್ಮಜ್ಜಿ, ಮನೇಲಿ ಮಗು ಹುಟ್ಟಿದೆ, ಬಾಣಂತಿ ಇದ್ದಾಳೆ, ಏನೂ ಕೊಡೋಕೆ ಆಗೊಲ್ಲ, ಮುಂದೆ ಹೋಗು ಅಂತ ಸಬೂಬು ಕೊಡ್ತಾಇದ್ದರು.

ಪುರಂದರದಾಸರೇ ಸಬೂಬು ಕೊಟ್ಟಾಗ, ಕೆಲವೊಂದು ಸಾರಿ ನಾವು ಏನೋ ಒಂದು ನೆಪ ಹೇಳಿ ದಾಸಯ್ಯನನ್ನು ಹೊರಗೆ ಕಳಿಸೋದು ತಪ್ಪಿಲ್ಲ ಬಿಡಿ. ಎಲ್ಲಾ ಸಮಯದಲ್ಲೂ ಎಲ್ಲರಿಗೂ ಮೂಡ್ ಒಂದೇ ಸಮನೆ ಇರೊಲ್ಲ. ಇನ್ನು, ದಾಸನಾದವನು ಹೇಗಿರ್ತಾನೆ.! ಅನ್ನುವುದಕ್ಕೆ ಉದಾಹರಣೆ ಅಂದ್ರೆ 'ಹನುಮಂತ'. ಶ್ರೀರಾಮನ ದಾಸ, ಶ್ರೀರಾಮನ ಧ್ಯಾನ ಮಾಡೋದು ಬಿಟ್ಟು, ಬೇರೇನನ್ನು ಅಪೇಕ್ಷಿಸದ ಶ್ರೀರಾಮನ ಪರಮ ಭಕ್ತ. ಆದರೂ, ಅದೇಕೋ ಇತ್ತೀಚೆಗೆ ಈ ದಾಸಯ್ಯಗಳು ಹೆಚ್ಚಾಗಿ ಕಾಣಿಸಿಕೊಳ್ಳೊಲ್ಲ. ಅವರೂ ಬೇರೇ ಬದುಕುವ ದಾರಿ ಕಂಡುಕೊಂಡಿರಬಹುದು ಅನ್ನಿಸುತ್ತೆ ಮುಂದೊಂದು ದಿನ ಮನೆಯ ಮುಂದೆ ದಾಸಯ್ಯ ಬಂದ್ರೆ ಒಂದೆರಡು ಭಗವಂತನ ಕೀರ್ತನೆ ಹೇಳಿಸಿ, ಭಿಕ್ಷೆ ನೀಡೀ ಮುಂದಕ್ಕೆ ಕಳಿಸೋಣ.

ನೀವೇನಂತೀರಿ?



◆ ವಿ.ಎಸ್.ಮಣಿ
9845055582

**ಸಂಘದ 2020ನೇ ಸಂವತ್ಸರದ ಕ್ಯಾಲೆಂಡರ್ ಪ್ರಾಯೋಜಕರಿಗೆ ಧನ್ಯವಾದಗಳು**

***K. Manjunarayan & K. Shivram *T.N. Raghu**
***Prasad & Kumar *R. Ramesh *S. Umesh**
***K. Gundappa *Arun & Ashok *B. Sridhar**
***T.N. Ravikiran * A.L. Sundaramurthy**
***R.S. Prashanth *M.R. Ravishankar**
***Dr. S. Ramadevi *S. Chandrashekar**
***B.K.Ganesh Kumar *B.R.Shankar Prasad**
***Prasun Management Services**



# ಬದಲಾದ ಬದುಕು ಅಯ್ಯೋ....!

**ಒಂ**ದಾನೊಂದು ಕಾಲದಲ್ಲಿ, ಒಂದಾನೊಂದು ದೇಶದಲ್ಲಿ ಕಛೇರಿಗಳು ಬೆಳಗ್ಗೆ ಒಂಬತ್ತುವರೆಗೆ ತೆರೆಯುತ್ತಿದ್ದವು. ಕೆಲಸಗಾರರು ಬಂದು ಮೇಜು, ಕುರ್ಚಿಗಳನ್ನು ಸ್ವಚ್ಛ ಮಾಡಿ ಕಾಗದ ಪತ್ರಗಳನ್ನು ಓರಣವಾಗಿ ಜೋಡಿಸುತ್ತಿದ್ದರು.

ಹತ್ತರ ಹೊತ್ತಿಗೆ ಕೆಲಸ ಪ್ರಾರಂಭವಾಗುತ್ತಿತ್ತು. ಸಿಬ್ಬಂದಿ ವರ್ಗದವರು ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತು ಶ್ರಮವಹಿಸಿ ಕೆಲಸ ಮಾಡುತ್ತಿದ್ದರು. ಮಧ್ಯಾನ್ಹ ಒಂದರ್ಧ ಗಂಟೆ ಊಟ ಮುಗಿಸಿ ಮತ್ತೆ ಕೆಲಸ. ಸಂಜೆ ಐದುವರೆಗೆ ತಮ್ಮ ನಿಗದಿತ ಕೆಲಸವನ್ನು ಮುಗಿಸಿ ಮೇಲೇಳುತ್ತಿದ್ದರು. ತಮ್ಮ ದಿನದ ಕರ್ತವ್ಯವನ್ನು ಮುಗಿಸಿದೆವು ಎಂಬ ತೃಪ್ತಿ ಅವರಿ ಗಿರುತ್ತಿತ್ತು. ಅವರ ಮೇಲಿನವರಿಗೂ ಕೆಲಸ ಸರಿಯಾದ ಸಂತೋಷ ಮನೆಗೆ ಬರುವಾಗ, ದಾರಿಯಲ್ಲಿ ಹೆಂಡತಿಯ ಮುಡಿಗೊಂದು ಮೊಳ ಮಲ್ಲಿಗೆ ತಂದರೆ ಮತ್ತಷ್ಟು ಸಂತೋಷ. ಕಛೇರಿಯ ಕೆಲಸ ಮನೆಗೆ ತರುತ್ತಿರಲಿಲ್ಲ. ಅಲ್ಲಿನದು ಅಲ್ಲಿಗೇ ಮನೆಯಲ್ಲಿ ಹೆಂಡತಿ ಮಕ್ಕಳೊಂದಿಗೆ ನಗು, ವಿಹಾರ. ರಾತ್ರಿ ಒಂದೆಡೆ ಕುಳಿತು ಊಟ, ಹರಟೆ ನಂತರ ಅದು ವಿಶ್ರಾಂತಿ ಸಮಯ ಇದೆಲ್ಲಿಯೋ ಕೇಳಿದ ಕಥೆ ಎಂದೆನಿಸುವುದಿಲ್ಲವೇ? ಮತ್ತೆ ಕಥೆಗೆ ಬರೋಣ.

ಪಶ್ಚಿಮ ದೇಶಗಳಿಂದ ಕೆಲ ಪ್ರವಾಸಿಗರು ಇಡೀ ಪ್ರಪಂಚವನ್ನು ಒಂದು ಹೊಳೆಹೊಳೆಯುವ ಪೆಟ್ಟಿಗೆಯಲ್ಲಿ ತುಂಬಿಕೊಂಡು ತಂದರು. ಅದನ್ನು ಜನ ಕಂಪ್ಯೂಟರ್ ಎಂದು ಕರೆದರೂ. ಅದರೊಳಗೆ ಇಂಟರ್‌ನೆಟ್ ಎಂಬ ಹೂರಣವನ್ನು ತುಂಬಿದರು. ಇದರ ಜೊತೆಗೆ ಹೆಂಡತಿಯನ್ನು ಬಿಟ್ಟರೂ, ಇದನ್ನು ಬಿಡಲಾರೆನೆಂಬಂಥ ಉಪಕರಣವನ್ನು ತಂದರು. ಜನ ಅದನ್ನು 'ಮೊಬೈಲ್ ಫೋನು' ಎಂದು ಗುರುತಿಸಿದರು. ಇವೆಲ್ಲ ನೌಕರಿ ಮಾಡುವವರ ಕೈ ಸೇರಿದವು. ಆಗ ಅವರೆಲ್ಲ ಈ ಉಪಕರಣಗಳನ್ನು ಬಳಸುವ ಉತ್ಸಾಹ ತೋರಿದರು. ಅಕ್ಷರಗಳನ್ನು, ಸಂಖ್ಯೆಗಳನ್ನು ಬಡಿಬಡಿದು ಪೆಟ್ಟಿಗೆಯೊಳಗೆ ತುಂಬಿದರು. ಅವರಿಗೆ ಅದೇ ಸಂತೋಷ! ಮಾಲೀಕರು, ಮೇಲಧಿಕಾರಿಗಳೂ ಸಂತೋಷಪಟ್ಟರು. ಈಗ ಮೊದಲಿಗಿಂತ ಹತ್ತು ಪಟ್ಟು ಕೆಲಸ ಹೆಚ್ಚಾಗುತ್ತಿದೆ. ಜಗತ್ತು ತುಂಬಾ ವೇಗವಾಗಿ ಮುಂದುವರೆಯುತ್ತಿದೆ ಎಂದು ಸಂಭ್ರಮಿಸಿದರು. ಕಾಲಾಂತರ ದೊಡ್ಡಪೆಟ್ಟಿಗೆ ಮಾಯವಾಗಿ ಚೀಲದಲ್ಲಿ ತುಂಬಿಕೊಂಡು, ಹೆಗಲಿಗೆ ತಗುಲಿಸಿಕೊಂಡು ಹೋಗುವ ಪುಸ್ತಕದಾಕಾರದ ಪೆಟ್ಟಿಗೆಗಳು ಬಂದವು. ಅವುಗಳನ್ನು 'ಲ್ಯಾಪ್‌ಟಾಪ್' ಎಂದು ಕರೆದರು. ಜನರ ಮಾಲೀಕರ ಉತ್ಸಾಹ ಹೆಚ್ಚಾಯಿತು. ಆಫೀಸಿನಲ್ಲಿ ಕೆಲಸ ಮುಗಿದೊಡನೆ ಅದನ್ನು ಚೀಲಕ್ಕೆ ಸೇರಿಸಿ ಮನೆಗೆ ನಡೆದು ಮತ್ತೆ ಮನೆಯಲ್ಲಿ ಕೆಲಸ. ಹೆಂಡತಿಯ ಮಲ್ಲಿಗೆ ಮಾಲೆ ಮರೆಯಾಯಿತು. ರಾತ್ರಿಯಲ್ಲಿ ಪೆಟ್ಟಿಗೆಯ ಮುಂದೆ ಕುಳಿತು ಪರದೆಯನ್ನು ನೋಡುತ್ತಾ, ನೋಡುತ್ತಾ ಕಣ್ಣಿನ ಕನ್ನಡಕಗಳು ದಪ್ಪವಾದುವು. ಹೊಟ್ಟೆ ಮುಂದೆ ಬಂದಿತು. ಮಾತ್ರೆಗಳ ಸಂಖ್ಯೆ ಹೆಚ್ಚಾಯಿತು. ಬರಬರುತ್ತಾ ನಿದ್ರೆ ಅಪರೂಪ ವಾಯಿತು. ಮನಸ್ಸಿನ ಶಾಂತತೆ ಕಡಿಮೆಯಾಗಿ ಮನೆಯ ಜನರೊಂದಿಗಿನ ಹೊಂದಾಣಿಕೆ ಹಿಂದೆ ಉಳಿಯಿತು. ವಿವಾಹಗಳು ಮುರಿಯ ತೊಡಗಿದವು. ಆತ್ಮಹತ್ಯೆಗಳು ಅಪರೂಪವಾಗಿ ಉಳಿಯಲಿಲ್ಲ. ಇದು ಇಂದಿನ ಕೆಲಸದ ಕಥೆ.

ಯಾವುದು ಸರಿ? ಕೆಲಸ ಮಾಡದಿರುವುದು ಆಲಸ್ಯತನ. ಆಲಸ್ಯತನ ಮಾನವನ ಸ್ವಭಾವಕ್ಕೆ ನಾಚಿಕೆಯ ವಿಷಯ. ಆದರೆ ಎಷ್ಟು ಕೆಲಸ ರಿ...? ಎಷ್ಟು ಕಾಲಧಾವಂತ, ಈ ಉಸಿರು ಬಿಗಿಹಿಡಿದು ಓಡುವ ಪರಿ! ಹೀಗೆ ಉಸಿರು ಬಿಗಿಹಿಡಿದು ಓಡುತ್ತಾ ಓಡುತ್ತಾ ಉಸಿರಾಡುವುದನ್ನೇ ಮರೆತು ಬಿಡುತ್ತೇವೇನೋ! ಎಲ್ಲವೂ ಒತ್ತಡದ ಬದುಕು. ಈ ಒತ್ತಡ ನಮ್ಮ ಜೀವನವನ್ನೇ ಒಡೆದೀತು.

ಕೊನೆಗೊಂದು ಪ್ರಶ್ನೆ? ನಮ್ಮ ಸಂತೋಷ ಬದುಕಿಗೆ ಕೆಲಸವೋ? ಕೆಲಸಕ್ಕಾಗಿ ಬದುಕೋ? ತೀರ್ಮಾನ, ಆಯ್ಕೆ ನಮ್ಮವೇ.



◆ **ಎನ್. ಶ್ರೀನಿವಾಸಯ್ಯ**
7899318098

## ಶುಭ ವಿವಾಹ

* ಸಂಘದ ಸದಸ್ಯೆ ಶ್ರೀಮತಿ ವಸುಂಧರಾ ಮತ್ತು ಶ್ರೀ ವಿಜಯ ಕೃಷ್ಣರವರ ಪುತ್ರ **ಶ್ರೀ ಭರತ್**‌ರವರ ವಿವಾಹವು ಶ್ರೀಮತಿ ರಮಾಮಣಿ ಮತ್ತು ಶ್ರೀ ಈಶ್ವರಮೂರ್ತಿರವರ ಪುತ್ರಿ **ಚಿ. ಸುಮಾ**ರವರ ವಿವಾಹವು **ದಿನಾಂಕ 28-11-19** ರಂದು ಬೆಂಗಳೂರಿನಲ್ಲಿ ನೆರವೇರಿತು.

***ನೂತನ ದಂಪತಿಗಳಿಗೆ ಸಂಘವು ಶುಭಹಾರೈಸುತ್ತದೆ.***

## ಮಂಕುತಿಮ್ಮನ ಕಗ್ಗ – ತಾತ್ಪರ್ಯ
## ನಿಷ್ಕಾಮ ಪೂಜೆ



**ಸುತೆಯ ಪೋಷಿಸಿ ಬೆಳೆಸಿ ಧನಕನಕದೊಡನವಳನ**
**ಇತರ ಗೃಹಕಿತ್ತು, ನೀಂ ಕೇಳ್ವಮುಯ್ಯೇನು?**
**ಪ್ರತಿಫಲವು ಬೇರೇಕೆ? ಸುಕೃತಕದುತಾನೆ ಫಲ**
**ಹಿತಮನದ ಪಾಕಕದು – ಮಂಕುತಿಮ್ಮ ॥**

ತಂದೆ ತಾಯಿಗಳು ಹೆಣ್ಣು ಮಗು ಆಯಿತೆಂದರೆ ಅದು ಬೇರೆಯವರ ಸ್ವತ್ತು ಎಂದು ತಿಳಿದಿದ್ದರೂ ಮಗಳನ್ನು ಚೆನ್ನಾಗಿ ಬೆಳೆಸುತ್ತಾರೆ. ಚೆನ್ನಾಗಿ ಪೋಷಿಸಿದ್ದಲ್ಲದೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡುತ್ತಾರೆ. ನಂತರ ಧನಕನಕ ವಸ್ತು ವಾಹನಗಳೊಂದಿಗೆ ಅನುರೂಪನಾದ ವರನಿಗೆ ಕೊಟ್ಟು ಮದುವೆ ಮಾಡುತ್ತಾರೆ. ನಂತರ ಗಂಡನ ಮನೆಗೂ ಕಳುಹಿಸುತ್ತಾರೆ. ಅದಕ್ಕೆ ಪ್ರತಿಫಲ ಏನಾದರೂ ಬೇಕೇ? ಇಲ್ಲ. ಒಳ್ಳೆಯ ಕೆಲಸಕ್ಕೆ ಪ್ರತಿಫಲ ಒಳ್ಳೆಯ ಕೆಲಸವೇ ಹೌದು, ಬೇರೇನೂ ಬೇಕಿಲ್ಲ. ಇದು ಮನಸ್ಸಿನ ಸಂಸ್ಕಾರ. ಮನಸ್ಸಿನ ಹಿತ.

ಈ ವಿಚಾರವು (ಪ್ರಸಂಗವು) ಕಾಳಿದಾಸನ "ಅಭಿಜ್ಞಾನ ಶಾಕುಂತಲ"ವನ್ನು ನೆನಪಿಸುತ್ತದೆ. ಅದರಲ್ಲೂ ಇಂಥದೇ ವಿಷಯ. ಕಣ್ವರು ಶಕುಂತಲೆಯನ್ನು ದುಷ್ಯಂತನ ಮನೆಗೆ ಕಳುಹಿಸುವಾಗ ಆಡಿದ ಮಾತಿದು. "ಯಾವತ್ತಿದ್ದರೂ ಹೆಣ್ಣು ಮಗಳು ಬೇರೆಯವರ ಒಡವೆ. ಅವಳು ನಮ್ಮಲ್ಲಿ ನ್ಯಾಸವಾಗಿ ಇಡಲ್ಪಟ್ಟವಳು. (ನ್ಯಾಸ ಎಂದರೆ ಭದ್ರತೆಗಾಗಿ ಇಡುವುದು, ಗಂಟು, ನಿಧಿ ಎಂಬ ಅರ್ಥವಿದೆ.)

ಆ ಒಡವೆಯನ್ನು ಅವಳ ಗಂಡನ ಮನೆಗೆ ಕಳುಹಿಸುವಾಗ ಆಗುವ ಒಂದು ಮನಸ್ಸಿನ ಸಮಾಧಾನ, ಇಂದು ನನಗೆ ಆಗಿದೆ ಎನ್ನುತ್ತಾರೆ. ವಹಿಸಿಕೊಟ್ಟ ಜವಾಬ್ದಾರಿಯನ್ನು ನೆರವೇರಿಸಿದಂಥ ಒಂದು ತೃಪ್ತ ಮನೋಭಾವ.

ಇಂಥಾ ಮನೋಭಾವವೇ ಮನಸ್ಸಿಗೆ ಹಿತವಾದದ್ದು. ಅದರಂತೆಯೇ ಭಕ್ತಿಯೂ ಹೀಗೆ ಅಕಾರಣವಾಗಿರಬೇಕು. ಪೂಜೆ, ಭಜನೆ, ಜಪ ಇವುಗಳಿಗೆ ಪ್ರತಿಫಲದ ಅಪೇಕ್ಷೆಯಿರಬಾರದು. ಪೂಜೆ ಭಜನೆಯಲ್ಲಿ ಮನಸ್ಸು ಏಕಾಗ್ರತೆಯಿಂದ ತನ್ನದು ಎಂಬುದೆಲ್ಲವನ್ನು ಮರೆತು ಪರಮಾತ್ಮನಲ್ಲಿ ಒಂದಾಗಬೇಕು. ಅದರಿಂದ ಆದ ಪರಮಾನಂದವನ್ನು ಪಡೆಯುವುದೇ ಪರಮ ಲಾಭ. ಬೇರೇನೂ ಬೇಕಿಲ್ಲ. ಇದೇ ಹಿತ ಮನದ ಪಾಕ. ಮನಸ್ಸು ಬುದ್ಧಿ ಪಕ್ವವಾಗುವುದಕ್ಕೆ ನಿಜವಾದ ದಾರಿ ಇದು. ಭಗವಂತನನ್ನು ಭಜಿಸಿದ ನಂತರ ಶ್ರೀಮನ್ನಾರಾಯಣೇತಿ ಸಮರ್ಪಯಾಮಿ" ಎಂದು ಕೈಮುಗಿಯಬೇಕು.

ನಿಷ್ಕಾಮ ಭಕ್ತಿಯಲ್ಲಿ ಆತ್ಮ ಸಮರ್ಪಣೆ ಇರಬೇಕು. ಅಹಂಕಾರ ಪೂರ್ಣವಾಗಿ ಅಡಗಿ ಶರಣಾಗತರಾಗಬೇಕು. ನಿಜವಾದ ಭಕ್ತಿ ಅಂದರೆ ಪ್ರೀತಿ, ಅನುರಾಗ ರಸವಷ್ಟೇ! ಕೇವಲ ಸಂತೋಷವೇ ಅದರ ಫಲ. ಇಂತಹ ಪ್ರೀತಿ ಇರುವವರು ತಮಗಾಗಿ ಏನನ್ನೂ ಬೇಡುವುದಿಲ್ಲ. ಭೀತಿಯಿಂದ ಪೂಜಿಸುವು ದಾಗಲೀ ವರವನ್ನು ಬೇಡುವ ಭಕ್ತಿ ಅಥವಾ ನನಗೆ ಒಳ್ಳೆಯದಾದರೆ ನಿನಗೆ ಪೂಜೆ ಮಾಡಿಸುತ್ತೇನೆ ಎಂಬ ಭಕ್ತಿಯಾಗಲೀ ಭಗವಂತನಿಗೆ ಬೇಕಿಲ್ಲ. ಅದನ್ನು ನಾವು ಅರಿಯಬೇಕು.

"ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ ಸುಳಿದು ಬೀಸುವ ಗಾಳಿ ನಿಮ್ಮ ದಾನ" ಎನ್ನುವಂತೆ ಪರಮೇಶ್ವರ ಪಂಚಭೂತಗಳನ್ನು ಪ್ರಪಂಚಕ್ಕಾಗಿ ಸೃಷ್ಟಿಸಿ ನಮ್ಮನ್ನು ಉಪಕರಿಸಿದ್ದಾನೆ. "ಎಲ್ಲವನ್ನೂ ಕೊಟ್ಟಿರುವೆ ಏನ ಬೇಡಲಿ ನಿನ್ನ" ಎನ್ನುವಂತೆ ಸಮಾಧಾನ ಸ್ಥಿತಿಯಲ್ಲಿರಬೇಕು.

ಸೂರ್ಯೋದಯವನ್ನು, ಆ ಅರುಣರಾಗವನ್ನು ಕಂಡಾಗ ಆಗುವ ಆನಂದ ಸಮುದ್ರದ ದಡದಲ್ಲಿ ನಿಂತು ಅಪಾರ ಜಲರಾಶಿಯನ್ನು ನೋಡಿದಾಗ ಆಗುವ ಒಂದು ಗಂಭೀರ ದರ್ಶನ: ಹಿಮಾಲಯ ಪರ್ವತದ ಉತ್ತುಂಗ ಶಿಖರವನ್ನು ನೋಡಿದಾಗ ಆಗುವ ಸಂತೋಷ ಎಂಥಾ ಅದ್ಭುತ! ಭಗವಂತನ ಆ ಕೊಡುಗೆ ನಮ್ಮನ್ನು ಕುಬ್ಜರನ್ನಾಗಿಸುತ್ತದೆ. ಆಶ್ಚರ್ಯ ಬೆರಗು ವಿಸ್ಮಯಗಳಿಂದ ಕಾಣುವುದಷ್ಟೇ ನಮ್ಮ ಕೆಲಸ. ನವವಿಧ ಭಕ್ತಿಗಳಿವೆ. ಅದರಲ್ಲಿ ಯಾವುದು ಮಾಡಿದರೂ ಸರಿ, ಅರ್ಚನೆ, ಭಜನೆ, ಕೀರ್ತನೆ, ದಾಸೋಹಂ, ಶರಣಾಗತಿ ಈ ರೀತಿ ಯಾವ ವಿಧದಲ್ಲಾದರೂ ಭಗವಂತನಿಗೆ ಧನ್ಯವಾದವನ್ನು ಅರ್ಪಿಸಬೇಕು. ಇಂತಹ ಪೂಜೆಯನ್ನು ಮಾಡುವಾಗ ಮನಸ್ಸು ಶಾಂತಿಯಿಂದ ಇರಬೇಕು. ಏನೋ ಒಂದು ಅವರ್ಣೀಯ ಆನಂದ ಉಂಟಾಗುತ್ತದೆ. ಅಂತರಂಗದಲ್ಲಿ ಶಾಂತಿ ಮತ್ತು ಕಾಂತಿ ಉಂಟಾಗುತ್ತದೆ. ಇದೇ ಕೇವಲ ಆನಂದದ "ಆತ್ಮಾರಾಮ ಆನಂದರಮಣ".

ಪ್ರತಿಯೊಬ್ಬ ಪ್ರಜೆಯನ್ನು ಪಾಲಿಸಿ ಪೋಷಿಸುವ ಪರಮಾತ್ಮನಿದ್ದಾನೆ. ಅವನಿಗೆ ನಮಗೇನುಬೇಕೆಂಬ ಅರಿವಿದೆ. ನಮ್ಮ ಆಶಯವನ್ನು ನೆರವೇರಿಸುತ್ತಾನೆ. ಇಲ್ಲದಿದ್ದರೆ ಅದು ನಮ್ಮ ಅಧರ್ಮದ ಫಲ ಎಂದರಿಯಬೇಕು. "ಧರ್ಮೋ ರಕ್ಷತಿ ರಕ್ಷಿತಃ" (ನಾವು ಧರ್ಮವನ್ನು ರಕ್ಷಿಸಿದರೆ ಧರ್ಮವು ನಮ್ಮನ್ನು ರಕ್ಷಿಸುತ್ತದೆ).

ಭಕ್ತಿಯೆಂಬುದು ಆ ದೇವನಿಗೆ ತೋರುವ ಪ್ರೀತಿ. "ಸಂಕಟ ಬಂದಾಗ ವೆಂಕಟರಮಣ" ಎನ್ನುವಂತೆ ಸುಖದಲ್ಲಿದ್ದಾಗ ನೆನೆಯದೆ ಕಷ್ಟಕೋಟಲೆಗಳು ಬಂದಾಗ ಅವನನ್ನು ನೆನೆಯುತ್ತೇವೆ. ದೇವಸ್ಥಾನಕ್ಕೆ ಹೋಗಿ ದೇವರಿಗೆ ಅಭಿಷೇಕ ಮಾಡಿಸುವುದೋ, ಇಲ್ಲ ಹೋಮ ಮಾಡಿಸುವುದೋ, ಇಲ್ಲ ಹುಂಡಿಗೆ ದುಡ್ಡನ್ನು ಹಾಕುವುದೋ ಮಾಡುತ್ತೇವೆ. ಅಲ್ಲಿಗೆ ಭಕ್ತಿ ಎನ್ನುವುದು ವ್ಯಾಪಾರವಾಯಿತು. ಕೊಟ್ಟು ತೆಗೆದುಕೊಳ್ಳುವ ಪುಣ್ಯವೇ ಅವನು? ಅವನಿಗೆ ಬೇಕಾಗಿರುವುದು ನಿಷ್ಕಲ್ಮಶ ಪ್ರೀತಿ, ನಿರ್ಮಲ ಪ್ರೀತಿ. "ಸರ್ವೇಜನಾಃ ಸುಖಿನೋಭವಂತು" ಎನ್ನುವ ಮನಸ್ಸು ಅಂತಃಕರಣ ಅವನಿಗೆ ಪ್ರಿಯ.

ಹೆಸರಿಲ್ಲದೆ, ಹೆಸರೊಲ್ಲದ ಫಲಾಪೇಕ್ಷೆಯಿಲ್ಲದ, ನಿಸ್ಪೃಹತೆಯಿಂದ ಮಾಡುವ ಭಕ್ತಿಯೇ ನಿಜ, ಸತ್ಯವಾದದ್ದು. ಸತ್ಯ, ನಿಷ್ಠೆ, ಪ್ರಾಮಾಣಿಕತೆ ಮತ್ತು ಭಾವಪೂರ್ಣದಿಂದ ಆ ಭಗವಂತನನ್ನು ಭಜಿಸಿ, ಭಾಗ್ಯವಂತರಾಗೋಣವೇ ?!

ಇನ್ನೊಂದು ಮಾತಿದೆ. ನಿಷ್ಕಾಮ ಭಕ್ತಿಯ ಜೊತೆಗೆ ನಿಷ್ಕಾಮ ಕರ್ಮವೂ ಇದೆ. "ಸಂತೋಷಂ ಜನಯೇತ್ ಪ್ರಾಜ್ಞಃ ತವೇವೇಶ್ವರ ಪೂಜನಂ" ಎಂಬ ನುಡಿಯಿದೆ. ಜನಗಳಲ್ಲಿ ಸಂತೋಷ ಉಂಟು ಮಾಡುವುದೇ ಈಶ್ವರ ಪೂಜೆ ಎಂದು ಅರ್ಥ "ವಚನೇಕ ದರಿದ್ರತಾ" ಎಂಬ ನುಡಿಯೂ ಇದೆ. ನಮ್ಮ ಮಾತಿನಿಂದ ಯಾರಾದರೊಬ್ಬರ ಮನಸ್ಸು ಸಂತೋಷಪಟ್ಟರೆ ಮಾತಿಗೆ ಬಡತನ ಯಾಕೆ ಎಂಬ ಅರ್ಥವಿದೆ ಹಾಗೆ ನಮ್ಮ ನಡೆನುಡಿಗಳಿಂದ ಜನರ ಮನಸ್ಸಿಗೆ ಹಿತವನ್ನುಂಟು ಮಾಡುವುದೇ ಭಗವಂತನಿಗೆ ಪ್ರೀತಿಯಾಗುತ್ತದೆ. ಸೂರ್ಯನಿಗೆ ಸಹಸ್ರಾರು ಕಿರಣಗಳಿದ್ದಂತೆ ಜನರ

ಹಿತವನ್ನು ಮಾಡಲು ಬೇಕಾದಷ್ಟು ದಾರಿಗಳಿವೆ. ಉದಾ: ಆಸ್ಪತ್ರೆಯ ಒಳಗೆ ರೋಗಿ ನರಳುತ್ತಿರುವಾಗ ಹೊರಗೆ ಅವರ ಸಂಬಂಧ ಪಟ್ಟವರು ನೊಂದವರಿಗಾಗಿ ಕಾತರದಿಂದ, ಭಯದಿಂದ, ದಿಕ್ಕು ತೋಚದೆ ಆಹಾರದ ಚಿಂತನೆಯೂ ಇಲ್ಲದೆ ಪರದಾಡುತ್ತಿರುವಾಗ ಸಮಾಜ ಸೇವಕರು ಬಿಸಿಬಿಸಿಯಾದ ಪಾನೀಯ ಯಾವ ಪ್ರತಿಫಲಾಪೇಕ್ಷೆ ಇಲ್ಲದೆ ಕೊಡುತ್ತಿರುವುದೂ ಒಂದು ರೀತಿಯ ಸೇವೆಯೇ. ಅನಾಥವಾದ ಮಗುವನ್ನು ಕರೆದುಕೊಂಡು ಬಂದು ಮನೆಯಲ್ಲಿ ಪೋಷಿಸಿ, ಬೆಳೆಸಿ, ಓದಿಸಿ, ಒಂದು ಜೀವನವನ್ನು ಕೊಡುವುದು, ಅನಾಥಾಶ್ರಮಕ್ಕೆ ಹೋಗಿ ಕೈಲಾಗದ ಹಿರಿಯರು ಅಸಹಾಯಕತೆಯಿಂದ ಬಳಲುತ್ತಿರುವಾಗ, ಅಂತಹವರಿಗೆ ಕಾಲುಗಳನ್ನು ಒತ್ತುವುದೂ, ಬೆಳೆದ ಉಗುರುಗಳನ್ನು ಕತ್ತರಿಸುವುದೂ, ಶುಶ್ರೂಷೆ ಮಾಡುವುದೂ ನಿಷ್ಕಾಮ ಕರ್ಮ. ಇವೆಲ್ಲ ಭಗವಂತ ಮೆಚ್ಚುವ ಕೆಲಸ.

ಕೊಳಚೆಗೇರಿಯ ಮಕ್ಕಳಿಗೆ ಉಣಬಡಿಸಿ ಅವರ ಜೀವನೋಪಾಯವನ್ನು ಮಾಡಿಕೊಡುವುದೂ, ಅಪಘಾತದಲ್ಲಿ ನರಳಿ ಬಿದ್ದ ಮನುಷ್ಯನಿಗೆ ಪ್ರಥಮ ಚಿಕಿತ್ಸೆ ಮಾಡಿ (ಆರೈಕೆ ಮಾಡಿ) ಸಂಬಂಧಪಟ್ಟವರಿಗೆ ವಿಷಯ ತಿಳಿಸುವುದೂ, ಉಪಹಾರಗೃಹಕ್ಕೆ ಹೋಗಿ ಕಾಫಿಯ 2 ಚೀಟಿಗಳನ್ನು ತೆಗೆದುಕೊಂಡು ಒಂದನ್ನು ತಾನು ಕುಡಿದು ಮತ್ತೊಂದನ್ನು ಅವಶ್ಯಕತೆ ಇರುವವರಿಗೆ ಕೊಡುವುದೂ ಇವೆಲ್ಲವೂ ಪರಮಾತ್ಮನಿಗೆ ಪ್ರಿಯವಾದವುಗಳು. ದಾರಿಹೋಕರಿಗೆ, ಬಿಸಿಲಲ್ಲಿ ಪ್ರಯಾಣ ಮಾಡಿ ಬೆಂದು ಬಳಲಿದವರಿಗೆ ಅರವಟ್ಟಿಗೆಯನ್ನು ಏರ್ಪಾಡುಮಾಡಿ ತಂಪಾದ ಮಜ್ಜಿಗೆಯೋ, ಬೆಲ್ಲ ಮತ್ತು ನೀರನ್ನೋ ಕೊಟ್ಟು ಉಪಚರಿಸುವುದೂ ಒಂದು ರೀತಿಯ ಸೇವೆಯೇ. ಪ್ರವಾಹ ಪೀಡಿತರೂ, ಅಗ್ನಿ ದುರಂತಕ್ಕೀಡಾದವರನ್ನು ಕಾಪಾಡುವುದು ಹೀಗೆ ಜನಹಿತದ ಅನೇಕ ಮಾರ್ಗಗಳಿವೆ. ಎಷ್ಟೋ ದೊಡ್ಡ ಮಹನೀಯರುಗಳೆಲ್ಲಾ ದೇವಸ್ಥಾನಕ್ಕೆ ಹೋಗಿ "ಚಪ್ಪಲಿ ಸೇವೆ" ಮಾಡುತ್ತಾರೆ. ಇದರಲ್ಲಿ ಯಾವ ಕೀಳರಿಮೆಯೂ ಇಲ್ಲ. ಭಕ್ತರ ಚಪ್ಪಲಿಗಳನ್ನು ನೋಡಿಕೊಂಡವರಿಗೆ ತಲುಪಿಸುವುದೂ ಒಂದು ಒಳ್ಳೆಯ ಕರ್ಮವೇ.

ಹೀಗೆ ಜನಸೇವೆ ಮಾಡಲು ಹಲವಾರು ಹಾದಿಗಳಿವೆ. ಕೇವಲ ಭಗವಂತನ ಪೂಜೆಯೇ ಅಲ್ಲದೆ ಈ ರೀತಿ ಸಮಾಜ ಸೇವೆ ಮಾಡಿ ದೀನ ದಲಿತರಿಗೆ ಸಹಾಯ ಮಾಡುವುದೂ ಒಂದು ನಿಷ್ಕಾಮ ಕರ್ಮ. ಅದೂ ಭಕ್ತಿ ಎನಿಸುತ್ತದೆ. ಏಕೆಂದರೆ ಇವೆಲ್ಲ ಭಗವಂತನಿಗೆ ಪ್ರಿಯವಾದ ವಿಷಯಗಳು. ಆದುದರಿಂದ ದೇವರ ಆರಾಧನೆಯ ಜೊತೆಗೆ ಅಸಹಾಯಕರಾದ ಜನಗಳಿಗೆ ಉಪಕಾರ ಮಾಡಿ ಧನ್ಯರಾಗೋಣವೇ?

"ಸರ್ವೇ ಜನಾಃ ಸುಖಿನೋ ಭವಂತು"

◆ ಜಿ.ಪಿ. ಲಕ್ಷ್ಮೀದೇವಿ
23444798

| ಹೊಸ ಪೋಷಕ ಸದಸ್ಯರು | |
|---|---|
| ಚಿ. ವಿಹಾನ್ ಆರ್. ಪ್ರಸಾದ್ | 5000/– |
| **ಹೊಸ ಸದಸ್ಯರು** | |
| ಶ್ರೀ ಭರತ್ ವಿಜಯ್ ಕೃಷ್ಣ | 1000/– |
| ಶ್ರೀಮತಿ ಎನ್. ಪದ್ಮಜಾ ರವಿ | 1000/– |
| ಶ್ರೀಮತಿ ಶ್ವೇತಾ ಅರುಣ್ | 1000/– |
| ಶ್ರೀಮತಿ ಬಿ.ಎಸ್. ಉಮಾ ಜಯರಾಮ್ | 1000/– |
| ಶ್ರೀ ಭಾನುಪ್ರಕಾಶ್ | 1001/– |

| ವಿದ್ಯಾನಿಧಿ ದಾನಿಗಳು | |
|---|---|
| ಶ್ರೀಮತಿ ಮಂಜುಳ ನಾರಾಯಣ್‌ರಾವ್ | 5001/– |
| ಶ್ರೀಮತಿ ಪಾರ್ವತಿ ದೇವಿ | 5000/– |

| ವಾರ್ಷಿಕ ನಿರ್ವಹಣೆ ವೆಚ್ಚ ನೀಡಿದ ಸದಸ್ಯರು | |
|---|---|
| ಶ್ರೀ ಬಿ.ಪಿ.ಎಸ್. ಮೂರ್ತಿ | 1000/– |
| ಶ್ರೀಮತಿ ವಿದ್ಯಾ ಮೂರ್ತಿ | 1000/– |
| ಶ್ರೀ ಆರ್.ಎಸ್. ರಮೇಶ್ | 1000/– |
| ಶ್ರೀ ತ್ಯಾಗರಾಜನ್ ಎಸ್. | 500/– |
| ಶ್ರೀಮತಿ ಅನುರಾಧ ಟಿ. | 500/– |
| ಡಾ॥ ಶ್ರೀಧರ್ ರಾಮಚಂದ್ರನ್ | 500/– |
| ಶ್ರೀ ಟಿ.ಪಿ. ಸೂರ್ಯನಾರಾಯಣ್ | 500/– |
| ಶ್ರೀಮತಿ ನಾಗಪದ್ಮ ಎಸ್. | 500/– |
| ಶ್ರೀ ಎನ್. ಅಶ್ವತ್ | 1500/– |
| ಶ್ರೀ ಉಮೇಶ್ | 500/– |



ಹಿರಿಯ ಸದಸ್ಯ ಶ್ರೀಯುತ ಅಟ್ಟೂರು ರಾಮಕೃಷ್ಣ ಶರ್ಮ ದಂಪತಿಗಳು ತಮ್ಮ 50ನೇ ವರ್ಷದ ವಿವಾಹ ವಾರ್ಷಿಕೋತ್ಸವ ಸಂದರ್ಭದಲ್ಲಿ ಕುಟುಂಬ ಸದಸ್ಯರೊಂದಿಗೆ.




ಸಂಘದ ಹಿರಿಯ ಸದಸ್ಯ
ಶ್ರೀ ನಿರಂಜನ್ ಅವರಿಂದ
ಕಾರ್ತಿಕ ಸೋಮವಾರ
ಶಿವಲಿಂಗಕ್ಕೆ ರುದ್ರಾಭಿಷೇಕ

## ನೆನಪಿನಂಗಳದಲ್ಲಿ ಚಿತ್ರ 41



ಸಮುದಾಯದ ಹಿರಿಯ ಸದಸ್ಯರಾದ ಪಂಡಿತ್ ಶೇಷಾದ್ರಿ ಗವಾಯಿಯವರ ಪುತ್ರ ಅರವಿಂದ್‌ರವರ ವಿವಾಹ ಮಹೋತ್ಸವದ ಚಿತ್ರ



ಸಮ್ಮದ್ ಎಸ್.
(ಗಿರಿಧರ್)
(ಶ್ರೀ ಟಿ.ಎಸ್. ಮಣಿ ಯವರ ಪುತ್ರ)

## ಜನನ



* ಸಂಘದ ಹಿರಿಯ ಸದಸ್ಯ ಶ್ರೀ ರವಿಕುಮಾರ್ ಮತ್ತು ಶ್ರೀಮತಿ ವಸುಮತಿ ದಂಪತಿಗಳ ಮಗ ಸಂಘದ ಸದಸ್ಯ ವಿದ್ವಾನ್ ಕಾರ್ತಿಕ್ ಮತ್ತು ಶ್ರೀಮತಿ ರಶ್ಮಿ ದಂಪತಿಗಳಿಗೆ ದಿನಾಂಕ 24–09–2019ರಂದು ಗಂಡು ಮಗು ಜನನವಾಯಿತು.

* ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀಯುತ ಕೆ.ಬಿ.ಎಸ್. ಶರ್ಮಾ ದಂಪತಿಗಳ ಪುತ್ರ ಸಂಘದ ಸದಸ್ಯ ಶ್ರೀ ಭರತ್‌ಶರ್ಮಾ ದಂಪತಿಗಳಿಗೆ ದಿನಾಂಕ 21–10–19 ರಂದು ಹೆಣ್ಣುಮಗು ಜನನವಾಯಿತು.

**ಶಿಶುಗಳಿಗೆ ಭಗವಂತ ಆರೋಗ್ಯ–ಆಯಸ್ಸು ನೀಡಲೆಂದು ಸಂಘ ಪ್ರಾರ್ಥಿಸುತ್ತದೆ.**

## ಗೃಹಪ್ರವೇಶ




* ಸಂಘದ ಸದಸ್ಯ ಶ್ರೀ ನಿರಂಜನ್ ದಂಪತಿಗಳ ಪುತ್ರಿ ಸದಸ್ಯೆ ಶ್ರೀಮತಿ ಪದ್ಮಜಾ ಮತ್ತು ಶ್ರೀ ರವಿಯವರ **'ಭಾರದ್ವಾಜ ನಿಲಯ'**ದ ಗೃಹಪ್ರವೇಶವು ದಿನಾಂಕ 24–11–2019 ರಂದು ಬೆಂಗಳೂರಿನಲ್ಲಿ ನೆರವೇರಿತು.

**ಸಂಘವು ಶುಭ ಹಾರೈಸುತ್ತದೆ**

## ಶ್ರದ್ಧಾಂಜಲಿ

## ನಮ್ಮನ್ನಗಲಿದ ನಮ್ಮವರಿಗೆ ಗೌರವ ನಮನ



* ಸಂಘದ ಸದಸ್ಯ ಶ್ರೀ ರವಿಶಂಕರ್‌ರವರ ತಂದೆ, ಸಂಘದ ಹಿರಿಯ ಸದಸ್ಯರಾಗಿದ್ದ **ಕೆ.ವಿ. ರಾಧಾಕೃಷ್ಣರವರು** (85) ದಿನಾಂಕ 06–10–2019ರಂದು ನಮ್ಮನ್ನಗಲಿದರು.

*



* ಸಂಘದ ಹಿರಿಯ ಸದಸ್ಯೆ **ಗೌರಮ್ಮ ಎ ಕೃಷ್ಣಮೂರ್ತಿ**ಯವರು 12–10–2019ರಂದು ನಮ್ಮನ್ನಗಲಿದರು. (ಯಮಲೂರು ಶ್ರೀನಿವಾಸಯ್ಯ ಹಾಗೂ ಶಾರದಮ್ಮನವರ ಮಗಳು) ಸಂಘದ ಹಿರಿಯ ಸದಸ್ಯರಾದ ಶ್ರೀ ಜಿ.ಎಸ್. ಸತ್ಯಮೂರ್ತಿ, ಜಿ.ಎಸ್. ನಾಗರಾಜ್‌ರವರ ಸೋದರಿ. ಈಕೆಯ ಮಕ್ಕಳಾದ ಕೆ.ಕೆ. ಚಂದ್ರಶೇಖರ್, ಮಂಜುನಾಥ್ ಕೆ. ಗಾಯತ್ರಿ ಗುರುದತ್ತ ಹಾಗೂ ಶ್ರೀಮತಿ ಸರಸ್ವತಿಯವರು.

*



* ಸಂಘದ ಸ್ಥಾಪಕ ಸದಸ್ಯ ಎಸ್.ವಿ. ಕೃಷ್ಣಪ್ಪ ನವರ ತಮ್ಮ ಶತಾಯುಷಿ **ಎಸ್.ವಿ. ರಾಮಕೃಷ್ಣ** ರವರು ದಿನಾಂಕ 18–11–2019 ರಂದು ನಮ್ಮನ್ನಗಲಿದರು. ದಿವಂಗತರು ಸಂಘದ ಸದಸ್ಯರಾದ ಶ್ರೀ ಬದರಿನಾರಾಯಣ ಮತ್ತು ಶ್ರೀ ಮಹೇಶ್ ರವರ ತಂದೆ.

*

* ಸಂಘದ ನಿಕಟಪೂರ್ವ ಕಾರ್ಯದರ್ಶಿಗಳಾದ ಶ್ರೀ ವಿ.ಎಸ್. ಮಣಿರವರ ಅತ್ತೆ ಶತಾಯುಷಿ ಶ್ರೀಮತಿ **ಶಾರದಮ್ಮ ಮಂಜುನಾಥ ಕಾರಂತ**ರವರು ದಿನಾಂಕ 02–12–2019ರಂದು ನಮ್ಮನ್ನಗಲಿದರು.

ಯುವ ಪ್ರತಿಭೆ

# ಕು॥ ವಾಣಿಶ್ರೀ ರಾಮಕೃಷ್ಣ



◆ ಆರ್. ರಮೇಶ್

**ಸಂ**ಘದ ಸದಸ್ಯ ಶ್ರೀ ವಿ. ರಾಮಕೃಷ್ಣ ಮತ್ತು ಶ್ರೀಮತಿ ಪ್ರಭಾವತಿ ದಂಪತಿಗಳ ಪುತ್ರಿ, ಕುಮಾರಿ ವಾಣಿಶ್ರೀ. (ಜನನ 4–7–2000) ಪದವಿಯಲ್ಲಿ ಓದುತ್ತಿದ್ದರೂ ಅವರ ತೀವ್ರ ಆಸಕ್ತಿ ಸಂಗೀತ.

ವಾಣಿಶ್ರೀ ತನ್ನ ಕರ್ನಾಟಕ ಶಾಸ್ತ್ರೀಯ ಸಂಗೀತ ಶಿಕ್ಷಣವನ್ನು ವಿದೂಷಿ ಸೌಮ್ಯಾರಾವ್‌ರವರಲ್ಲಿ ಪ್ರಾರಂಭಿಸಿ, ಈಗ ವಿದೂಷಿ ಕಲಾವತಿ ಅವಧೂತ್‌ರವರಲ್ಲಿ ಮುಂದುವರೆಸುತ್ತಿದ್ದಾರೆ. ಶಾಲೆಯಲ್ಲಿ ಓದುತ್ತಿದ್ದಾಗಲೇ ಹಲವಾರು ಸ್ಪರ್ಧೆಗಳಲ್ಲಿ ಭಾಗವಹಿಸಿ ನಗದು ಪ್ರಶಸ್ತಿ ಮತ್ತು ಪ್ರಮಾಣ ಪತ್ರ ಪಡೆದಿರುತ್ತಾರೆ. ಇದರಲ್ಲಿ ಕೆಲವನ್ನು ಹೆಸರಿಸುವುದಾದರೆ ಅವರು ಓದಿದ ಶಾಲೆ, ಬಾಲಭವನ್ ಸಂಘ, ವಿಜಯನಗರ ಸಂಗೀತ ಸಭಾ, ಗಿರಿನಗರ ಸಂಗೀತಸಭಾ, ಅದಮ್ಯ ಚೇತನ ಸಭಾ, ಜಯನಗರದ ಜಯರಾಮಸೇವಾ ಮಂಡಳಿ ಮುಂತಾದವು.

ವಾಣಿಶ್ರೀ 2012ರಲ್ಲಿ ದೇವರನಾಮ ಭೂಷಣ ಎಂಬ ಪರೀಕ್ಷೆಯಲ್ಲಿ ಶ್ರೇಷ್ಠ ದರ್ಜೆಯನ್ನು ಗಳಿಸಿ ಶ್ರೀರಂಗಪಟ್ಟಣದಲ್ಲಿ 'ಬಾಲಪ್ರತಿಭೆ' ಪುರಸ್ಕಾರವನ್ನು ಸ್ವೀಕರಿಸಿದ್ದಾರೆ. ಕರ್ನಾಟಕ ಸರ್ಕಾರ ಏರ್ಪಡಿಸುವ ಕರ್ನಾಟಕ ಶಾಸ್ತ್ರೀಯ ಜೂನಿಯರ್ ಹಾಗೂ ಸೀನಿಯರ್ ವಿಭಾಗದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

ವಾಣಿಶ್ರೀ ಸಂಗೀತ ಕಲಿಯಲು ಬೆಂಬಲ ಹಾಗೂ ಪ್ರೋತ್ಸಾಹಿಸುತ್ತಿರುವರಲ್ಲಿ ಅವರ ತಂದೆ, ತಾಯಿ, ತಾತ ಸುಬ್ಬಣ್ಣ, ದೊಡ್ಡಪ್ಪ ಸತ್ಯನಾರಾಯಣರವರಿಗೆ ಧನ್ಯವಾದ ಹೇಳಲು ಮರೆಯುವುದಿಲ್ಲ.

ಖಾಸಗಿ ದೂರದರ್ಶನ ವಾಹಿನಿಯಾದ "ಟಿವಿ9"ನಲ್ಲೂ ವಾಣಿಶ್ರೀಗೆ ಹಾಡುವ ಅವಕಾಶ ದೊರೆಕಿದೆ. ಪ್ರಮುಖವಾಗಿ ಕಿರಿಯ ವಯಸ್ಸಿನಲ್ಲೇ ಕಲಿಯುಗ ಪ್ರತ್ಯಕ್ಷ ದೈವವಾದ ತಿರುಮಲದಲ್ಲಿ ನೆಲೆಸಿರುವ ಶ್ರೀ ವೆಂಕಟೇಶ್ವರ ದೇವಾಲಯದ ಆವರಣದಲ್ಲಿ ಸಂಗೀತ ಸೇವೆ ಮಾಡುವ ಸೌಭಾಗ್ಯ ಒದಗಿರುವುದು ಭಗವಂತನ ಅನುಗ್ರಹಕ್ಕೆ ಸಾಕ್ಷಿ.

ಸಂಘವು ಕು॥ ವಾಣಿಶ್ರೀ ಸಂಗೀತ ಕ್ಷೇತ್ರದಲ್ಲಿ ಹೆಚ್ಚಿನ ಶಿಕ್ಷಣ ಪಡೆದು ಇನ್ನೂ ಹಲವಾರು ಸಂಗೀತ ಕಾರ್ಯಕ್ರಮಗಳನ್ನು ನೀಡಿ ಜನಮೆಚ್ಚುಗೆ ಪಡೆಯಲೆಂದು ಸಂಘವು ಹಾರೈಸುತ್ತದೆ.














# ವಾರ್ತಾ ಚಿತ್ರಗಳು......



ಸಂಘದ ಸದಸ್ಯ ಖಂಜಿರ ವಿದ್ವಾನ್ ಗುರುಪ್ರಸನ್ನರವರು 'ಕಾಂಚನೋತ್ಸವ' ಸಮಾರಂಭದಲ್ಲಿ ಸಂಗೀತ ಕಲಾನಿಧಿ ಶ್ರೀಮತಿ ಕನ್ಯಾಕುಮಾರಿ ಅವರ ಪಿಟೀಲು ವಾದನಕ್ಕೆ ಪಕ್ಕವಾದ್ಯದಲ್ಲಿ.



ಹಿರಿಯ ಸದಸ್ಯ ಶ್ರೀಯುತ ಅಟ್ಟೂರು ರಾಮಕೃಷ್ಣ ಶರ್ಮ ದಂಪತಿಗಳಿಗೆ 50ನೇ ವರ್ಷದ ವಿವಾಹ ವಾರ್ಷಿಕೋತ್ಸವ ಸಂದರ್ಭದಲ್ಲಿ ಸಂಘದ ಅಭಿನಂದನೆಗಳು.

* *



ದಿನಾಂಕ 12–10–2019ರಂದು ದಿ॥ ಶ್ರೀಕಂಠೇಶ್ವರ ಐಯ್ಯರ್ ಮತ್ತು ಪದ್ಮಾವತಮ್ಮ ದಂಪತಿಗಳ ಸವಿನೆನಪಿನಲ್ಲಿ ನಡೆದ ಸಂಗೀತ ಕಾರ್ಯಕ್ರಮದಲ್ಲಿ ತಬಲಾ ನುಡಿಸುತ್ತಿರುವ ಸಂಘದ ಸದಸ್ಯ ವಿದ್ವಾನ್ ಆರ್.ಎಸ್. ಪ್ರಶಾಂತ್.



ಸಂಘದ ಲೆಕ್ಕಪರಿಶೋಧಕ ಶ್ರೀ ಬಿ.ಎನ್.ಜಿ. ಕುಮಾರ್–ಕಾವೇರಿ ದಂಪತಿಗಳ ಪುತ್ರಿ ಕು॥ ಸಾಯಿ ಸಿಂಧೂರರವರ ಭರತನಾಟ್ಯ ಕಾರ್ಯಕ್ರಮ ಭಾರತಿ ವಿದ್ಯಾಭವನದಲ್ಲಿ.




ಗಿರಿನಗರದ ಶ್ರೀ ಶಾರದಾಂಬಾ ದೇವಾಲಯದ ಶರನ್ನವರಾತ್ರಿ ಉತ್ಸವದಲ್ಲಿ ಕುಮಾರಿ ವಾಣಿಶ್ರೀ ಸಂಗೀತ ಕಚೇರಿ.



ಸಂಘದ ಸದಸ್ಯೆ ಶ್ರೀಮತಿ ದೀಪ್ತಿ ಅಜಯ್‌ರವರ ಪುತ್ರಿ ಚಿ॥ ಆದ್ಯಳ ನಾಮಕರಣ ಸಂದರ್ಭದಲ್ಲಿ

**ಐದು ತಲೆಮಾರಿನ ಚಿತ್ರ**

ಶ್ರೀಮತಿ ಲಕ್ಷ್ಮೀದೇವಮ್ಮ ರಾಮನಾಥನ್ (92)
ಶ್ರೀಮತಿ ರಾಜಲಕ್ಷ್ಮೀ ರಾಮಕೃಷ್ಣ (73)
ಶ್ರೀಮತಿ ರಾಧಾ ವೆಂಕಟೇಶ್ (50)
ಶ್ರೀಮತಿ ದೀಪ್ತಿ ಅಜಯ್ (28)
ಕುಮಾರಿ ಆದ್ಯ ರಾವ್ (9 ತಿಂಗಳು).



ಸಂಘದ ಸದಸ್ಯ ಶ್ರೀ ಪಾರ್ಥಸಾರಥಿ ಮತ್ತು ಶ್ರೀಮತಿ ಭಾರತಿ ದಂಪತಿಗಳ ಪುತ್ರಿ ಕುಮಾರಿ ಭಾವನಾ ರವರಿಗೆ ಆನೇಕಲ್ ಸೇಂಟ್ ಜೋಸೆಫ್ ಶಾಲೆಯಲ್ಲಿ ಕನ್ನಡದಲ್ಲಿ 125ಕ್ಕೆ 125 (10ನೇ ತರಗತಿ) ಪಡೆದಿರುವುದಕ್ಕೆ ಪ್ರತಿಭಾ ಪುರಸ್ಕಾರ ನೀಡಿದೆ.



**ಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ**
**ಶ್ರೀಪಾದಂಗಳವರಿಗೆ**
**ಸಂಘದ ಗೌರವಪೂರ್ವಕ ಪ್ರಣಾಮಗಳು**



**ಬೃಹಚ್ಚರಣ ಸಂಘವು 2020ನೇ ಹೊಸವರ್ಷದ ವಾರ್ಷಿಕ ದಿನಚರಿ ಬಿಡುಗಡೆ ಮಾಡಿದ ಸಂದರ್ಭ**

ಪ್ರವಾಸದ ಛಾಯಾಚಿತ್ರಗಳನ್ನು ಈ ಸಂಚಿಕೆಗೆ ನೀಡಿರುವ ಛಾಯಾಗ್ರಾಹಕರಾದ
ಶ್ರೀಯುತ ಶ್ಯಾಂಸುಂದರ್, ಸುನಿಲ್, ಅರ್ಜುನ್ ಹಾಗೂ
ಶ್ರೀಮತಿ ಅಂಜಲಿರವರಿಗೆ ಧನ್ಯವಾದಗಳು. –ಸಂ.



**ಸಂಘದ ಹಿರಿಯ ಸದಸ್ಯೆ ಶ್ರೀಮತಿ ಇಂದಿರಮ್ಮ ಶಂಕರನಾರಾಯಣರವರು ಸಂಘಕ್ಕೆ 1 ಲಕ್ಷ ರೂಪಾಯಿ ದೇಣಿಗೆ ನೀಡಿದ ಸಂದರ್ಭ**

*If undelivered please return to :*
*President*
**'Bruhacharana Sangha'**
No. 27/1, Bull Temple Road,
Basavanagudi,
Bengaluru - 560 004.

To,

Book-Post

Published by Sri B. Subramanyam, President, 'BRUHACHARANA SANGHA' No. 27/1, Bull Temple Road, Basavanagudi, Bengaluru - 560 004.
Printed at Keerthi Printers, Omkara, 240-F, 2nd D Cross, 2nd 'B' Main, Girinagar 1st Phase, Bengaluru - 560 085, Ph : 080-26722034